# ಕರುನಾಡು ನುಡಿ

ಕನ್ನಡ ದಿನ ಪತ್ರಿಕೆ

KARUNADU NUDI KANNADA DAILY NEWS PAPER

ಸಂಪಾದಕರು : ಯಲ್ಲಾಲಿಂಗ

PRGI No. : KNKAN/25/A4632 | karunadunudi01@Gmail.com

EDITOR : YALALING
Mobile : 8050109316

ಸಂಪುಟ : 01 Volume : 01 | ಸಂಚಿಕೆ : 215 Issue : 215 | ದಿನಾಂಕ : 25-08-2026 DATE : 25-08-2026 | ಮಂಗಳವಾರ TUESDAY | ಪುಟ : 4 Page : 4 | ಬೆಲೆ : 1.00 Price : 1.00


## ಪಾಪನಾಶ ಲಿಂಗದೇವರ ಪಾದಯಾತ್ರೆ ಹಾಗೂ ಭಜನೆ-ಕೀರ್ತನೆ

ಬೀದರ್: ಪಾಪನಾಶ ಲಿಂಗದೇವರ ಪಾದಯಾತ್ರೆ ಹಾಗೂ ಭಜನೆ-ಕೀರ್ತನೆ ಮತ್ತು ಸಂಗೀತ ಕಾರ್ಯಕ್ರಮ ಭಕ್ತಿಭಾವದಿಂದ ನಡೆಯಿತು. ಪಾದಯಾತ್ರೆಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಭಜನೆ ಹಾಗೂ ಕೀರ್ತನೆಗಳ ಮೂಲಕ ದೇವರ ನಾಮಸ್ಮರಣೆ ಮಾಡಿದರು.

ಕಾರ್ಯಕ್ರಮದಲ್ಲಿ ಗುಂಡೂರಾವ್, ಅರವಿಂದ ಗುರೂಜಿ, ವಿಜಯಲಕ್ಷ್ಮಿ ಲಕ್ಷೆಟ್ಟಿ, ರವಿಕುಮಾರ, ಶಿವಕುಮಾರ ರಾಣಿ ಹೋಕರಣೆ, ಚನ್ನಮ್ಮ ವಲ್ಲೆಪೂರ್, ಕಾವ್ಯ, ಗುಂಡೂರಾವ್ ಬಿರಾದಾರ್, ರವಿ, ಪಲ್ಲವಿ, ವಿಜಯಲಕ್ಷ್ಮಿ, ಪ್ರಬುದ್ಧಿ, ಶ್ರೀವನ್, ಜ್ಯೋತಿ, ಸವಿತಾ ಹಾಗೂ ಶೀಲವಂತ ಸೇರಿದಂತೆ ಹಲವರು ಭಾಗವಹಿಸಿದ್ದರು.

ಭ'ಜನೆ, ಕೀರ್ತನೆ ಹಾಗೂ ಸಂಗೀತ ಕಾರ್ಯಕ್ರಮದಲ್ಲಿ ಭಕ್ತರು ಭಕ್ತಿಭಾವದಿಂದ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಖರ್ಗೆಗೆ ಅವಮಾನ: ಕಾಂಗ್ರೆಸಿಗರ ಮೌನಕ್ಕೆ ಖಂಡನೆ

ಬೀದರ್: ಉತ್ತರಾಖಂಡದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಆದ ಅಪಮಾನದ ಕುರಿತು ಕಾಂಗ್ರೆಸ್‌ನ ಅನೇಕ ರಾಷ್ಟ್ರೀಯ ನಾಯಕರು ಮೌನ ವಹಿಸಿರುವುದನ್ನು ಡಾ. ಬಿ.ಆರ್. ಅಂಬೇಡ್ಕರ್ ಯುತ್ ಬ್ರಿಗೇಡ್ ಅಧ್ಯಕ್ಷ ಉದಯ ನಾಯಕ್ ತೀವ್ರವಾಗಿ ಖಂಡಿಸಿದ್ದಾರೆ.

ತಾವು ಭಾಷಣ ಮಾಡಿದ ಸ್ಥಳವನ್ನು ಬಲಪಂಥೀಯ ಸಂಘಟನೆಯೊಂದು ಶುದ್ಧೀಕರಿಸಿದ ವಿಚಾರದಲ್ಲಿ ಸ್ವ ಪಕ್ಷದಿಂದ ತಮಗೆ ನಿರೀಕ್ಷಿತ ಬೆಂಬಲ ಸಿಗಲಿಲ್ಲ ಎಂದು ಖರ್ಗೆ ಅವರೇ ಹೇಳಿಕೆ ನೀಡಿದ್ದು, ಸ್ವಪಕ್ಷೀಯರು ರಾಷ್ಟ್ರೀಯ ಅಧ್ಯಕ್ಷರ ಬೆಂಬಲಕ್ಕೆ ಬಾರದಿರುವುದು ಕಳವಳಕಾರಿಯಾಗಿದೆ ಎಂದು ಹೇಳಿದ್ದಾರೆ.

ಅಪಮಾನ ಪ್ರಕರಣ ಬೆಳಕಿಗೆ ಬರುತ್ತಲೇ ಪಕ್ಷದ ನಾಯಕರು ಕಟು ಶಬ್ದಗಳಲ್ಲಿ ಖಂಡಿಸಬೇಕಿತ್ತು. ಆದರೆ, ಹಾಗೆ ಆಗಿಲ್ಲ ಎಂದು ತಿಳಿಸಿದ್ದಾರೆ. ಖರ್ಗೆ ಅವರು ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಪಡಿಸಲು ಅವಿರತ ಶ್ರಮಿಸುತ್ತಿದ್ದಾರೆ. ಪಕ್ಷದ ಕಾರ್ಯಕರ್ತರಲ್ಲಿ ಹೊಸ ಚೈತನ್ಯ ತುಂಬಿದ್ದಾರೆ. ಪಕ್ಷದ ಮುಖಂಡರು ಅವರ ಅವಮಾನ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸದಿರುವುದು ಬೇಸರದ ಸಂಗತಿ ಎಂದು ತಿಳಿಸಿದ್ದಾರೆ. ಕೂಡಲೇ ಖರ್ಗೆ ಅವರನ್ನು ಅವಮಾನಿಸಿದ ಪ್ರಕರಣದ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

## ಔರಾದ್ ಕ್ಷೇತ್ರದಲ್ಲಿ ಹಾಳಾದ ವಿವಿಧ ರಸ್ತೆ:ಕರವೇ ಎಚ್ಚರಿಕೆ

### ರಸ್ತೆ ದುರಸ್ತಿಪಡಿಸದಿದ್ದರೆ ಪಿಡಬ್ಲ್ಯೂಡಿ ಕಚೇರಿ ಎದುರು ಪ್ರತಿಭಟನೆ

ಬೀದರ್: ಹಾಳಾದ ಔರಾದ್ ವಿಧಾನಸಭಾ ಕ್ಷೇತ್ರದ ರಸ್ತೆಗಳನ್ನು ದುರಸ್ತಿಪಡಿಸದಿದ್ದರೆ ಬೀದರ್‌ನ ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಮುಧೋಳ ಎಚ್ಚರಿಕೆ ನೀಡಿದ್ದಾರೆ.

ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆ ಅಧೀನದ ಅನೇಕ ಜಿಲ್ಲಾ ಮುಖ್ಯ ರಸ್ತೆಗಳು ತೀವ್ರವಾಗಿ ಹದಗೆಟ್ಟಿವೆ. ಹೀಗಾಗಿ ಪ್ರಯಾಣಿಕರು ಸಂಚಾರಕ್ಕೆ ಬಹಳ ತೊಂದರೆ ಅನುಭವಿಸು ವಂತಾಗಿದೆ ಎಂದು ತಿಳಿಸಿದ್ದಾರೆ.

ಠಾಣಾಕುಶನೂರು-ಮುಧೋಳ್, ಔರಾದ್-ಮುಧೋಳ, ತೆಲಂಗಾಣ ಗಡಿ-ಸುಂದಾಳ-ಇಟಗ್ಯಾಳ್-ಚಿಂತಾಕಿ-ರಾಯಪಳ್ಳಿ ಕ್ರಾಸ್, ಚಿಂತಾಕಿ- ತುಳಜಾಪುರ, ಎಕಲಾರ್-ಬೆಲ್ದಾಳ್ ಮತ್ತಿತರ ರಸ್ತೆಗಳ ಉದ್ದಕ್ಕೂ ತಗ್ಗು ದಿನ್ನೆಗಳು ಸೃಷ್ಟಿಯಾಗಿವೆ ಎಂದು ಹೇಳಿದ್ದಾರೆ. ನಿತ್ಯ ನೂರಾರು ವಾಹನಗಳು ಸಂಚರಿಸುವ ರಸ್ತೆಗಳ ಸ್ಥಿತಿ ಅಧೋಗತಿಯಾಗಿದೆ. ವಾಹನಗಳು ಅನಿವಾರ್ಯವಾಗಿ ಸರ್ಕಸ್ ಮಾಡುತ್ತಾ ಸಾಗಬೇಕಾಗಿದೆ ಎಂದು ತಿಳಿಸಿದ್ದಾರೆ. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ತಾಲ್ಲೂಕಿನಲ್ಲಿ ಹದಗೆಟ್ಟಿರುವ ಜಿಲ್ಲಾ ಮುಖ್ಯರಸ್ತೆಗಳ ಸಮೀಕ್ಷೆ ನಡೆಸಬೇಕು. ಕೂಡಲೇ ಅವುಗಳ ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

## ಲಿಂಗಾಯತ ಸಮೃದ್ಧಿ ಪತ್ತಿನ ಸೌಹಾರ್ದ ಸಹಕಾರಿ ಮಹಾಸಭೆ 30ಕ್ಕೆ

ಬೀದರ್: ಲಿಂಗಾಯತ ಸಮೃದ್ಧಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದ 6ನೇ ವಾರ್ಷಿಕ ಮಹಾಸಭೆ ಆಗಸ್ಟ್ 30 ರಂದು ಸಂಜೆ 6ಕ್ಕೆ ನಗರದ ಶಿವನಗರದ ಹಾವಪ್ಪ ಕಾಂಪ್ಲೆಕ್ಸ್‌ನಲ್ಲಿ ಇರುವ ಸಹಕಾರಿಯ ಕಚೇರಿಯಲ್ಲಿ ಜರುಗಲಿದೆ.

ಸಹಕಾರಿಯ ಅಧ್ಯಕ್ಷ ಅಣವೀರ ಕೂಡಂಬಲ್ ಅಧ್ಯಕ್ಷತೆ ವಹಿಸುವರು. ಸಭೆಯಲ್ಲಿ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಯಲಿದೆ. ಸಹಕಾರಿಯ ಸದಸ್ಯರು ತಪ್ಪದೆ ಮಹಾಸಭೆಯಲ್ಲಿ ಪಾಲ್ಗೊಂಡು, ಸಹಕಾರಿಯ ಬೆಳವಣಿಗೆಗೆ ತಮ್ಮ ಸಲಹೆ ನೀಡಬೇಕು ಎಂದು ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೋರಿದ್ದಾರೆ.

### ಯುವ ಜಾಗೃತಿ ಸಮಾವೇಶದಲ್ಲಿ ಮಾಜಿ ಸಚಿವ ಬಂಡೆಪ್ಪ ಕಾಶೆಂಪುರ ಹೇಳಿಕೆ

## ಸಂಗೊಳ್ಳಿ ರಾಯಣ್ಣಗೆ ಜಾತಿಗೆ ಸೀಮಿತಗೊಳಿಸದಿರಿ



ಬೀದರ್: ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ಅವರನ್ನು ಯಾವುದೇ ಒಂದು ಜಾತಿಗೆ ಸೀಮಿತಗೊಳಿಸಬಾರದು ಎಂದು ಮಾಜಿ ಸಚಿವ ಬಂಡೆಪ್ಪ ಕಾಶೆಂಪುರ ಹೇಳಿದರು.

ನಗರದ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರದಲ್ಲಿ ಗೊಂಡ ಪರ ಸಂಘಟನೆಗಳ ಒಕ್ಕೂಟದಿಂದ ಸ್ವಾತಂತ್ರ್ಯೋತ್ಸವ ಹಾಗೂ ಸಂಗೊಳ್ಳಿ ರಾಯಣ್ಣ ಜಯಂತಿ ನಿಮಿತ್ತ ಈಚೆಗೆ ಆಯೋಜಿಸಿದ್ದ ಯುವ ಜಾಗೃತಿ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಪರಾಕ್ರಮಿ, ದೇಶ ಭಕ್ತರಾಗಿದ್ದ ರಾಯಣ್ಣ ಇಡೀ ದೇಶದ ಆಸ್ತಿ ಎಂದು ಹೇಳಿದರು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಮೃತರಾವ್ ಚಿಮಕೋಡೆ ಮಾತನಾಡಿ, ಹಿಂದೆ ಸಂಗೊಳ್ಳಿ ರಾಯಣ್ಣ ಬ್ರಿಟಿಷರ ವಿರುದ್ಧ ಹೋರಾಡಿದ್ದರು. ಇಂದಿನ ಯುವಕರು ಮಾದಕ ವಸ್ತುಗಳ ವಿರುದ್ಧ ಹೋರಾಟ ನಡೆಸಬೇಕಾಗಿದೆ ಎಂದು ತಿಳಿಸಿದರು.

ರಾಯಣ್ಣ ಅವರ ತತ್ವ, ಆದರ್ಶಗಳನ್ನು ಯುವಕರು ಪಾಲಿಸಬೇಕು ಎಂದರು.

ವಿಧಾನ ಪರಿಷತ್ ಮಾಜಿ ಸಭಾಪತಿ ರಘುನಾಥರಾವ್ ಮಲ್ಕಾಪುರೆ ಮಾತನಾಡಿ, ಸ್ವಾತಂತ್ರ್ಯೋತ್ಸವ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಜನ್ಮದಿನದ ಅಂಗವಾಗಿ ಯುವ ಜಾಗೃತಿ ಸಮಾವೇಶ ಹಮ್ಮಿಕೊಂಡಿರುವುದು



ಶ್ಲಾಘನೀಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಗೊಂಡ ಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ತುಕಾರಾಮ ಚಿಮಕೋಡೆ ಮಾತನಾಡಿ, ಒಕ್ಕೂಟವು ಆರು ವರ್ಷಗ'ಳಿಂದ ಗೊಂಡ ಸಮಾಜದ ಹಿತ ರಕ್ಷಣೆಗೆ ಶ್ರಮಿಸುತ್ತಿದೆ. ಸಮಾಜಕ್ಕೆ ಅನ್ಯಾಯವಾದಾಗ, ಪ್ರತಿಭಟಿಸಿದೆ. ಒಳ್ಳೆಯ ಕೆಲಸವನ್ನು ಬೆಂಬಲಿಸುತ್ತ ಬಂದಿದೆ. ಯುವಕರೇ ದೇಶದ ಸಂಪತ್ತು ಆಗಿರುವ ಕಾರಣ ಅವರಿಗೆ ಸರಿಯಾದ ಮಾರ್ಗ ತೋರಲು ಈ ಬಾರಿ ಯುವ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಔರಾದ್ ತಾಲ್ಲೂಕು ಘಟಕದ ಅಧ್ಯಕ್ಷ ಬಾಲಾಜಿ ಅಮರವಾಡಿ, ಸಾಹಿತಿ ಬಾಲಾಜಿ ಕುಂಬಾರ್ ಹಾಗೂ ಟೀಮ್ ಯುವಾದ ವಿನಯ್ ಮಾಳಗೆ ಅವರು ಸಂವಾದ ನಡೆಸಿಕೊಟ್ಟರು.

ವ'ುಖಂಡ'ರಾದ' ಬಾಬುರಾವ್ ಮಲ್ಕಾಪುರ, ಬಸವರಾಜ ಮಾಳಗೆ, ಮಲ್ಲಿಕಾರ್ಜುನ ಬಿರಾದಾರ(ಪರಿಹಾರ), ಶಕುಂತಲಾ ಕನ್ನಡ ಸಾಹಿತ್ಯ ಪರಿಷತ್‌ನ ಬೆಲ್ದಾಳೆ, ಆನಂದ ಕಾಶೆಂಪುರ, ಎಂ.ಎಸ್. ಕಟಗಿ, ಬಾಬುರಾವ್ ಲದ್ದೆ, ಭೀಮಸಿಂಗ್, ಇಂದುಮತಿ ಚಿದ್ರಿ, ಅನಿಲಕುಮಾರ ಬೆಲ್ದಾರ್, ಪ್ರದೀಪ್ ಜಂಜೀರೆ, ದೇವೇಂದ್ರ ಸೋನಿ, ಪಂಡಿತ ಚಿಮಕೋಡ್, ರಾಮ ಚಾಂದೋರಿ, ಸಂಗಪ್ಪ ಚಿದ್ರಿ, ಒಕ್ಕೂಟದ ಬೀದರ್ ತಾಲ್ಲೂಕು ಘಟಕದ ಅಧ್ಯಕ್ಷ ಕುಶಾಲ್ ಹಾಸಗೊಂಡ, ಕಾರ್ಯದರ್ಶಿ ಪಂಡಿತ ಹಾವಗೊಂಡ, ಗುಂಡಪ್ಪ ಚಾಂಬೋಳ್ ಇದ್ದರು.

ನಾಗೇಶ ಜಾನಕನೋರ ನಿರೂಪಿಸಿದರು. ಮಾಣಿಕಪ್ಪ ಬರಿದಾಬಾದ್ ಸ್ವಾಗತಿಸಿದರು. ಸಿದ್ದು ಗಾದಗಿ ವಂದಿಸಿದರು.

## ಬೀದರ್ ದಕ್ಷಿಣ ಘಟಕದ ಕಚೇರಿ ಉದ್ಘಾಟನೆ

## ಜಿಲ್ಲೆಯಲ್ಲಿ ಆಮ್ ಆದ್ಮಿ ಪಕ್ಷ ಬಲವರ್ಧನೆ



ಬೀದರ್: ಜಿಲ್ಲೆಯಲ್ಲಿ ಆಮ್ ಆದ್ಮಿ ಪಕ್ಷ ಬಲ ಹೆಚ್ಚಿಸಿಕೊಳ್ಳುತ್ತಿದೆ ಎಂದು ಪಕ್ಷದ ಉತ್ತರ ಕರ್ನಾಟಕ ಸಂಘಟನಾ ಕಾರ್ಯದರ್ಶಿ ಅರ್ಜುನರಾವ್ ಹಲಗೌಡರು ಹೇಳಿದರು.

ನಗರದ ಚಿದ್ರಿ ರಿಂಗ್ ರಸ್ತೆಯಲ್ಲಿರುವ ನ್ಯೂ ಆದರ್ಶ ಕಾಲೊನಿಯಲ್ಲಿ ಆಮ್ ಆದ್ಮಿ ಪಕ್ಷದ ಬೀದರ್ ದಕ್ಷಿಣ ಘಟಕದ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಬರುವ ದಿನಗಳಲ್ಲಿ ಪಕ್ಷದ ಚಟುವಟಿಕೆಗಳು ಮತ್ತಷ್ಟು ಚುರುಕುಗೊಳ್ಳಲಿವೆ ಎಂದು ತಿಳಿಸಿದರು. 2028 ರ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿಯುವುದು ಆಮ್ ಆದ್ಮಿ ಪಕ್ಷದ ಗುರಿಯಾಗಿದೆ ಎಂದು ಅಧ್ಯಕ್ಷತೆ ವಹಿಸಿದ್ದ ಪಕ್ಷದ ಜಿಲ್ಲಾ ಘಟಕದ ಉಪಾಧ್ಯಕ್ಷ ರಾಜಕುಮಾರ ಎನ್. ಪಾಟೀಲ ಹೇಳಿದರು. ಪಕ್ಷ ಅಧಿಕಾರಕ್ಕೆ ಬಂದರೆ ರಾಜ್ಯದ ಜನರಿಗೆ ಉಚಿತ ವೈದ್ಯಕೀಯ ಸೇವೆ ಹಾಗೂ ಮಕ್ಕಳಿಗೆ ಉಚಿತ ಶಿಕ್ಷಣ ಒದಗಿಸುವ ಉದ್ದೇಶ ಹೊಂದಿದೆ ಎಂದು ತಿಳಿಸಿದರು.

ಪಕ್ಷದ ಕಲಬುರಗಿ-ಬೀದರ್-ಯಾದಗಿರಿ ಉಸ್ತುವಾರಿ ದೀಪಕ್ ಮಾಲಗಾರ್ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ದಪ್ಪ ಫಲಾರಿ ಅವರು ಪಕ್ಷದ ಧ್ಯೇಯೋದ್ದೇಶಗಳ ಕುರಿತು ಮಾತನಾಡಿದರು. ಚೊಂಡಿಯ ಜಗದೀಶ್ವರ ಮಹಾರಾಜರು ಕಚೇರಿಯನ್ನು ಉದ್ಘಾಟಿಸಿದರು. ಪಕ್ಷದ ಜಿಲ್ಲಾ ಘಟಕ, ವಿವಿಧ ತಾಲ್ಲೂಕು ಘಟಕಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

## ಮಾನವ ಹಕ್ಕುಗಳ ಜಾಗೃತಿ ಕಾರ್ಯಕ್ರಮ



ಬೀದರ್: ಔರಾದ್ ತಾಲ್ಲೂಕಿನ ನಾಗೂರ(ಎಂ) ಗ್ರಾಮದಲ್ಲಿ ಮಾನವ ಹಕ್ಕುಗಳ ಕುರಿತ ಜಾಗೃತಿ ಕಾರ್ಯಕ್ರಮ ಭಾನುವಾರ ನಡೆಯಿತು.

ಮಾನವ ಹಕ್ಕುಗಳ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಹ್ಯೂಮನ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಕೌನ್ಸಿಲ್ ಆಫ್ ಇಂಡಿಯಾ ಅಧ್ಯಕ್ಷ ಈದುರು ಪದ್ಮಾಕರ ಹೇಳಿದರು.

ಜೀವಿಸುವ ಹಕ್ಕು ಸೇರಿದಂತೆ ಮಾನವನಿಗೆ ಹಲವು ಹಕ್ಕುಗಳು ಇವೆ ಎಂದು ತಿಳಿಸಿದರು.

ಹ್ಯೂಮನ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಕೌನ್ಸಿಲ್ ಆಫ್ ಇಂಡಿಯಾ ಮಂಡಲ ಅಧ್ಯಕ್ಷ ಜೀವನ್ ನಾಗೂರೆ, ಮಹಾರಾಷ್ಟ್ರದ ಜಾನ್ಸನ್, ಹೈದರಾಬಾದ್‌ನ ಬೆಂಜಮಿನ್, ವಿಜಯವಾಡದ ಅಬ್ರಾಹಂ, ಗಂಟಾ ದೇವಾನಂದ, ಬಾಬುರಾವ್ ಮತ್ತಿತರರು ಇದ್ದರು.

ಹ್ಯೂಮನ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಕೌನ್ಸಿಲ್ ಆಫ್ ಇಂಡಿಯಾ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

## 25 ವರ್ಷಗಳ ವಕೀಲಿವೃತ್ತಿ ಪೂರ್ಣಗೊಳಿಸಿದ ಮೂವರು ವಕೀಲರಿಗೆ ಸನ್ಮಾನ





ಬೀದರ್: ಬೀದರ್ ಜಿಲ್ಲಾ ವಕೀಲರ ಸಂಘದ ಸಭಾಂಗಣದಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ 25 ವರ್ಷಗಳ ವಕೀಲಿವೃತ್ತಿ ಪೂರ್ಣಗೊಳಿಸಿದ ಹಿರಿಯ ವಕೀಲರಾದ ಬಸವರಾಜ್ ಭಳ್ಳಾ ಕಂಗನಕೋಟ, ಅಶೋಕ್ ಕುಮಾರ್ ಮಾನೂರೆ ಹಾಗೂ ಸಂಜು ಕುಮಾರ್ ಸಜ್ಜನ್ ಅವರ ಬೆಳ್ಳಿ ಮಹೋತ್ಸವವನ್ನು ಆಚರಿಸಿ, ಸನ್ಮಾನಿಸಲಾಯಿತು.

ಜಿಲ್ಲಾ ವಕೀಲರ ಸಂಘ ಹಾಗೂ ನ್ಯಾಯಾಂಗ ಇಲಾಖೆಯ ಸಿಬ್ಬಂದಿ ಸಹಯೋಗದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಹಿರಿಯ ವಕೀಲರ ವೃತ್ತಿಪರ ಸೇವೆ ಮತ್ತು ಕಾನೂನು ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ ಗೌರವಿಸಲಾಯಿತು.

ಸಮಾರಂಭದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಜಿಲ್ಲೆಯ ವಿವಿಧ ನ್ಯಾಯಾಲಯಗಳ ನ್ಯಾಯಾಧೀಶರು, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರು ಹಾಗೂ ಪದಾಧಿ ಕಾರಿಗಳು, ನ್ಯಾಯಾಂಗ ಇಲಾಖೆಯ ಸಿಬ್ಬಂದಿ ಮತ್ತು ವಕೀಲರ ಸಂಘದ ಸದಸ್ಯರು ಉಪಸ್ಥಿತರಿದ್ದರು.

25 ವರ್ಷಗಳ ಕಾಲ ವಕೀಲಿವೃತ್ತಿಯಲ್ಲಿ ಸೇವೆ ಸಲ್ಲಿಸಿರುವ ಮೂವರು ವಕೀಲರನ್ನು ಅಭಿನಂದಿಸಿದ ಗಣ್ಯರು, ಅವರ ಮುಂದಿನ ವೃತ್ತಿಜೀವನ ಇನ್ನಷ್ಟು ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

### ಮಾಸಿಕ ಶರಣ ಸಂಗಮದಲ್ಲಿ ಪರುಷಕಟ್ಟೆ ಚನ್ನಬಸವಣ್ಣ ಹೇಳಿಕೆ

## ನೂಲಿಯ ಚಂದಯ್ಯ ವಚನಗಳಲ್ಲಿ ಗುರು-ಲಿಂಗ ನಿಷ್ಠೆ





ಬೀದರ್: ನೂಲಿಯ ಚಂದಯ್ಯನವರ ವಚನಗಳಲ್ಲಿ ಗುರು, ಲಿಂಗ ಹಾಗೂ ಜಂಗಮ ನಿಷ್ಠೆ ತುಂಬಿ ತುಳುಕುತ್ತಿದೆ ಎಂದು ಪರುಷಕಟ್ಟೆ ಚನ್ನಬಸವಣ್ಣ ಹೇಳಿದರು.

ಲಿಂಗಾಯತ ಮಹಾ ಮಠದ ವತಿಯಿಂದ ನಗರದ ಬಸವಗಿರಿಯಲ್ಲಿ ಭಾನುವಾರ ಸಂಜೆ ಆಯೋಜಿಸಿದ್ದ 278ನೇ ಮಾಸಿಕ ಶರಣ ಸಂಗಮ ಹಾಗೂ ನೂಲಿಯ ಚಂದಯ್ಯನವರ ಸ್ಮರಣೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಚಂದಯ್ಯನವರ ವಚನಗಳು ಸರಳ, ಸುಂದರ ಹಾಗೂ ಅರ್ಥಪೂರ್ಣವಾಗಿ ವೆ. ಮನುಜರಿಗೆ ಮಾರ್ಗದ 'ರ್ಶಿಯಾಗಿವೆ ಎಂದು ತಿಳಿಸಿದರು. ಚಂದಯ್ಯನವರ ಒಟ್ಟು 48 ವಚನಗಳು ಲಭಿಸಿವೆ. ಅವರ ವಚನಾಂಕಿತ ಚಂದೇಶ್ವರ ಲಿಂಗ ಆಗಿದೆ ಎಂದರು.

ಸತ್ಯಶುದ್ಧ ಕಾಯಕ, ನಿತ್ಯ ದಾಸೋಹ ಚಂದಯ್ಯನವರ ಉಸಿರಾಗಿದ್ದವು. ಶೂನ್ಯ ಸಂಪಾದನೆಯಲ್ಲಿ ಅವರ ಎದೆಯಿಂದ ಲಿಂಗ ಜಾರಿದ ಪ್ರಸಂಗ ಹಾಗೂ ಇಷ್ಟಲಿಂಗದ ಅವಶ್ಯಕತೆಯನ್ನು ವಿವರಿಸಿದರು.

ಲಿಂಗಪೂಜೆ, ಗುರು ಸೇವೆ ಹಾಗೂ ಜಂಗಮ ದಾಸೋಹ ನಿಜವಾದ ಶರಣನ ಸಂಭ್ರಮ. ಈ ಮೂರರ ಅಳವಡಿಕೆಯಿಂದ ಶಿವಯೋಗ ಸಿದ್ಧಿಸುತ್ತದೆ ಎಂದು ತಿಳಿಸಿದರು.

ಮುಖ್ಯ ಅನುಭಾವ ಮಂಡಿಸಿದ ಕರ್ನಾಟಕ ವಚನ ಸಾಹಿತ್ಯ ಪರಿಷತ್ ಕೋಶಾಧ್ಯಕ್ಷ ಪ್ರೊ. ಉಮಾಕಾಂತ ಮೀಸೆ ಅವರು, ವಿಜಯಪುರ ಜಿಲ್ಲೆಯ ಶಿವಣಿಯಲ್ಲಿ ಜನಿಸಿದ ನೂಲಿಯ ಚಂದಯ್ಯ ಕಾಯಕ ಯೋಗಿ ಎಂದೇ ಪ್ರಸಿದ್ಧಿ ಪಡೆದಿದ್ದರು ಎಂದು ಹೇಳಿದರು.

ಬಸವಣ್ಣನವರತ್ತ ಆಕರ್ಷಿತರಾಗಿ, ಕಲ್ಯಾಣಕ್ಕೆ ಬಂದು ನೆಲೆಸಿದ್ದರು. ನೂಲಿನಿಂದ ಹಗ್ಗ-ಕಣ್ಣಿ ಮಾಡಿ ಮಾರಾಟ ಮಾಡಿ, ಗುರು, ಲಿಂಗ-ಜಂಗಮರಿಗೆ ಭಕ್ತಿಯಿಂದ ದಾಸೋಹಗೈಯುತ್ತಿದ್ದರು ಎಂದು ತಿಳಿಸಿದರು.

ಹುಲ್ಲಿನ ಮೆದೆ ಕೊಯ್ಯುವ ಕಾಯಕದಲ್ಲಿ ನಿರತರಾದಾಗ ಕೊರಳ ಲಿಂಗ ಜಾರಿ ನೀರಿಗೆ ಬಿದ್ದರೂ ಲೆಕ್ಕಿಸದೆ, ಕಾಯಕದಲ್ಲಿ ನಿರತರಾಗಿದ್ದರು. ಯಾರೇ ಆದರೂ ದುಡಿದು ಉಣ್ಣಬೇಕೆಂಬುದು ಅವರ ಉಪದೇಶ. ಲಿಂಗಯ್ಯನಿಗೂ ಹಗ್ಗ-ಕಣ್ಣಿ ಕಾಯಕದಲ್ಲಿ ತೊಡಗಿಸಿದ ಹೆಗ್ಗಳಿಕೆ ಚಂದಯ್ಯನವರದ್ದು ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 30 ವರ್ಷ ಅಪಘಾತ ರಹಿತ ಬಸ್ ಚಾಲಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ರಮೇಶ್ ಭದ್ರಪ್ಪನೋರ ಹಾಗೂ ಸಂಗೀತಾ ದಂಪತಿಯನ್ನು ಶಾಲು ಹೊದಿಸಿ, ನೆನಪಿನ ಕಾಣಿಕೆ ನೀಡಿ ಅಭಿನಂದಿಸಲಾಯಿತು.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕ ಪ್ರವೀಣ್ ಬರಗಲ್ ಉದ್ಘಾಟಿಸಿದರು. ಉದ್ಯಮಿ ಸಂತೋಷ್ ಪಾಟೀಲ ಅಧ್ಯಕ್ಷತೆ, ಅಶೋಕ ಎಲಿ ಸಮ್ಮುಖ ವಹಿಸಿದ್ದರು. ಸಾಹಿತಿ ರಮೇಶ ಮಠಪತಿ ಇದ್ದರು.

ಡಾ. ಬಸವದೀಪ್ತಿ ಗೋರನಾಳೆ ವಚನ ಗಾಯನ ಮಾಡಿದರು. ನೀಲಮ್ಮನ ಬಳಗದವರು ಪ್ರಾರ್ಥನೆ ನಡೆಸಿಕೊಟ್ಟರು. ಕದಳಿಶ್ರೀ ಮುತ್ತಂಗೆ ಸ್ವಾಗತಿಸಿದರು. ಶೋಭಾ ಅಣವೀರ ಕೂಡಂಬಲ್ ಭಕ್ತಿ ದಾಸೋಹಗೈದರು.

# ಬೀದಿ ವ್ಯಾಪಾರಿಗಳ ಶುಲ್ಕ ಏರಿಕೆ ವಿರೋಧಿಸಿ ಬಿಜೆಪಿ ಪ್ರತಿಭಟನೆ

## ಬಡ ವ್ಯಾಪಾರಿಗಳ ಮೇಲೆ ಹೆಚ್ಚುವರಿ ಶುಲ್ಕದ ಹೊರೆ ಹಾಕಬೇಡಿ:ಸೋಮನಾಥ ಪಾಟೀಲ್




ಬೀದರ್: ಬೀದಿ ವ್ಯಾಪಾರಿಗಳಿಂದ ನಗರ ಪಾಲಿಕೆ ವಸೂಲಿ ಮಾಡುತ್ತಿರುವ ಶುಲ್ಕವನ್ನು ರೂ.20ರಿಂದ 60ಕ್ಕೆ ಏರಿಸಿರುವುದನ್ನು ವಿರೋಧಿಸಿ ಭಾರತೀಯ ಜನತಾ ಪಕ್ಷದ ಬೀದರ ನಗರ ಘಟಕ ವತಿಯಿಂದ ಸೋಮವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಗಣೇಶ್ ಮೈದಾನದಿಂದ ನಗರ ಪಾಲಿಕೆ ಕಚೇರಿವರೆಗೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿ, ಬಳಿಕ ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಬಡ ಬೀದಿ ವ್ಯಾಪಾರಿಗಳ ಮೇಲೆ ಹೆಚ್ಚುವರಿ ಶುಲ್ಕದ ಹೊರೆ ಹಾಕಬಾರದು. ಈಗಾಗಲೇ ಜೀವನ ನಿರ್ವಹಣೆಗೆ ಕಷ್ಟಪಡುತ್ತಿರುವ ಸಣ್ಣ ವ್ಯಾಪಾರಿಗಳಿಂದ ದಿನಕ್ಕೆ ರೂ.60 ಶುಲ್ಕ ವಸೂಲಿ ಮಾಡುವ ಕ್ರಮವನ್ನು ಕೂಡಲೇ ಹಿಂಪಡೆಯಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಈ ಕುರಿತು ಮಾತನಾಡಿದ ಬಿಜೆಪಿ ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ್, "ಬೀದಿ ವ್ಯಾಪಾರಿಗಳ ಶುಲ್ಕವನ್ನು ರೂ.20ರಿಂದ ರೂ.60ಕ್ಕೆ ಏರಿಸಿರುವುದು ಬಡ ವ್ಯಾಪಾರಿಗಳಿಗೆ ಅನ್ಯಾಯವಾಗಿದೆ. ಶುಲ್ಕ ವಸೂಲಿ ಮಾಡುವ ಅಧಿಕಾರ ಯಾರಿಗೆ ನೀಡಲಾಗಿದೆ, ಟೆಂಡರ್ ಪ್ರಕ್ರಿಯೆ ಹೇಗೆ ನಡೆದಿದೆ, ಎಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ ಹಾಗೂ ವ್ಯಾಪಾರಿಗಳಿಂದ ಎಷ್ಟು ಹಣ ವಸೂಲಿ ಮಾಡಲಾಗುತ್ತಿದೆ ಎಂಬುದನ್ನು ನಗರ ಪಾಲಿಕೆ ಅಧಿಕಾರಿಗಳು ಸಾರ್ವಜನಿಕರಿಗೆ ಸ್ಪಷ್ಟಪಡಿಸಬೇಕು," ಎಂದು ಆಗ್ರಹಿಸಿದರು. "ಕೇವಲ ಸಚಿವರೊಬ್ಬರನ್ನೇ ಈ ವಿಚಾರದಲ್ಲಿ ಹೊಣೆಗಾರರನ್ನಾಗಿ ಮಾಡುವುದು ಸರಿಯಲ್ಲ. ನಗರ ಪಾಲಿಕೆ ಅಧಿಕಾರಿಗಳಿಗೂ ಸಮಾನ ಜವಾಬ್ದಾರಿ ಇದೆ. ಶುಲ್ಕ ವಸೂಲಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ಇರಬೇಕು. ಡುಪ್ಲಿಕೇಟ್ ರಸೀದಿ ಮೂಲಕ ಹಣ ವಸೂಲಿ ಮಾಡಲಾಗುತ್ತಿದೆಯೇ ಎಂಬುದನ್ನೂ ಪರಿಶೀಲಿಸಬೇಕು. ವ್ಯಾಪಾರಿಗಳಿಂದ ಹಣ ವಸೂಲಿ ಮಾಡುವಾಗ ಅಧಿಕೃತ ರಸೀದಿ ನೀಡಬೇಕು. ಸಾಧ್ಯವಾದರೆ ಕ್ಯೂಆರ್ ಕೋಡ್ ಮೂಲಕ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಬೇಕು," ಎಂದು ಅವರು ಹೇಳಿದರು. ನಗರದ ವಾಕಿಂಗ್ ಸ್ಟ್ರೀಟ್ ಸೇರಿದಂತೆ ವಿವಿಧ ವ್ಯಾಪಾರ ಪ್ರದೇಶಗಳಲ್ಲಿ ಬೀದಿ ವ್ಯಾಪಾರಿಗಳಿಗೆ ಸೂಕ್ತ ಸ್ಥಳಾವಕಾಶ ಕಲ್ಪಿಸಬೇಕು. ವಾಹನ ಸಂಚಾರ ಹಾಗೂ ವ್ಯಾಪಾರ ವ್ಯವಸ್ಥೆಯನ್ನು ಸಮರ್ಪಕವಾಗಿ ನಿಯಂತ್ರಿಸಿ, ವ್ಯಾಪಾರಿಗಳ ಜೀವನೋಪಾಯಕ್ಕೆ ತೊಂದರೆಯಾಗದಂತೆ ನಗರ ಪಾಲಿಕೆ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಆಗ್ರಹಿಸಿತು. ನಗರ ಘಟಕದ ಅಧ್ಯಕ್ಷ ಶಶಿ ಹೊಸಳ್ಳಿ ಅವರು ಮಾತನಾಡಿ ನಗರದ ಅಭಿವೃದ್ಧಿ ಕಾಮಗಾರಿಗಳಲ್ಲಿ ಗುತ್ತಿಗೆದಾರರು ಹಾಗೂ ಪ್ರಭಾವಿ ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ ಎಂದು ಬಿಜೆಪಿ ಮುಖಂಡರು ಶಾಸಕ ರಹೀಂ ಖಾನ್ ವಿರುದ್ಧ ಆರೋಪಿಸಿದರು. ಬಾಬು ವಾಲಿ ಅವರು ನಗರ ಪಾಲಿಕೆಯ ಕಾಮಗಾರಿಗಳ ಕಡತಗಳು ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಪರಿಶೀಲಿಸಿದರೆ, ಕೆಲವು ಗುತ್ತಿಗೆಗಳು ನಿರ್ದಿಷ್ಟ ವ್ಯಕ್ತಿಗಳು ಹಾಗೂ ಶಾಸಕರ ಸಂಬಂಧಿಕರಿಗೆ ಅನುಕೂಲವಾಗುವ ರೀತಿಯಲ್ಲಿ ನೀಡಲಾಗುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ ಎಂದು ಅವರು ಹೇಳಿದರು. ಸ್ಟ್ರೀಟ್‌ಲೈಟ್, ರಸ್ತೆ ಹಾಗೂ ಕಟ್ಟಡ ಕಾಮಗಾರಿಗಳ ಟೆಂಡರ್ ಯಾರಿಗೆ ನೀಡಲಾಗಿದೆ ಎಂಬುದನ್ನು ನಗರ ಪಾಲಿಕೆ ಅಧಿಕಾರಿಗಳು ಸಾರ್ವಜನಿಕರಿಗೆ ಬಹಿರಂಗಪಡಿಸಬೇಕು. ಎಲ್ಲ ಗುತ್ತಿಗೆದಾರರಿಗೆ ಸಮಾನ ಅವಕಾಶ ನೀಡಬೇಕು ಹಾಗೂ ಟೆಂಡರ್ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ಕಾಪಾಡಬೇಕು ಎಂದು ಒತ್ತಾಯಿಸಿದರು. ಬೀದರ್ ಜಿಲ್ಲೆಯಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಸಾವಿರಾರು ಮನೆಗಳು ಮಂಜೂರಾಗಿದ್ದು, ವಿವಿಧ ತಾಲೂಕುಗಳಲ್ಲಿ ಬಡವರಿಗೆ ಮನೆಗಳ ಹಂಚಿಕೆ ನಡೆದಿದೆ. ಆದರೆ ಬೀದರ್ ನಗರದಲ್ಲಿ ಕಳೆದ ಸುಮಾರು 15 ವರ್ಷಗಳಿಂದ ಬಡವರಿಗೆ ಒಂದೇ ಒಂದು ಮನೆ ಕೂಡ ನೀಡಲಾಗಿಲ್ಲ ಎಂದು ಅವರು ಆರೋಪಿಸಿದರು. ಆಶ್ರಯ ಯೋಜನೆಗೆ ಸಂಬಂಧಿಸಿದ ಸಭೆಗಳನ್ನು ಸಮರ್ಪಕವಾಗಿ ನಡೆಸದಿರುವುದರಿಂದ ಬಡವರಿಗೆ ಮನೆ ಕಲ್ಪಿಸುವ ಯೋಜನೆಗಳು ವಿಳಂಬವಾಗುತ್ತಿವೆ. ಮಂಜೂರಾದ ಅನುದಾನ ಬಳಕೆಯಾಗದೆ ವಾಪಸ್ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದ್ದರೆ, ಅದಕ್ಕೆ ಆಡಳಿತದ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿದರು.ಬೀದರ್ ನಗರದಲ್ಲಿ ಕೂಡಲೇ ಆಶ್ರಯ ಯೋಜನೆಯ ಸಭೆ ನಡೆಸಿ, ಜಿ+4 ಮಾದರಿಯ ಮನೆಗಳನ್ನು ನಿರ್ಮಿಸಿ ಅರ್ಹ ಬಡ ಕುಟುಂಬಗಳು ಹಾಗೂ ಬೀದಿ ವ್ಯಾಪಾರಿಗಳಿಗೆ ಹಂಚಿಕೆ ಮಾಡಬೇಕು ಎಂದು ಬಿಜೆಪಿ ಆಗ್ರಹಿಸಿತು. ಬೀದಿ ವ್ಯಾಪಾರಿಗಳ ಮೇಲಿನ ಹೆಚ್ಚುವರಿ ಶುಲ್ಕ ಹಿಂಪಡೆಯುವುದು, ಅಭಿವೃದ್ಧಿ ಕಾಮಗಾರಿಗಳ ಟೆಂಡರ್‌ಗಳಲ್ಲಿ ಪಾರದರ್ಶಕತೆ ಕಾಪಾಡುವುದು ಹಾಗೂ ಬಡವರಿಗೆ ವಸತಿ ಒದಗಿಸುವುದು ಸೇರಿದಂತೆ ಪ್ರಮುಖ ಬೇಡಿಕೆಗಳನ್ನು ಈಡೇರಿಸದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಸಿದರು. ಈ ಸಂದರ್ಭದಲ್ಲಿ ಈಶ್ವರಸಿಂಗ ಠಾಕೂರ, ಸುಭಾಷ್ ಮಡಿವಾಳ, ಗಣೇಶ್ ಭೋಸಲೇ, ಬಾಬು ವಲ್ಲ್ಯಾಪೂರೆ, ರೋಷನ್ ವರ್ಮಾ, ಪೀರಪ್ಪ ಔರಾದೆ, ಶ್ರೀನಿವಾಸ್ ಚೌದ್ರಿ, ರಾಜಶೇಖರ ನಾಗಮೂರ್ತಿ, ಹನುಮಂತ್ ಬುಕ್ಕಾ, ದೀಪಕ ಗಾದಗೆ, ನರೇಶ್ ಗೌಳಿ, ಆತ್ಮಾರಾಮ್, ಬಸವ ಮುಲಗೆ ನೂಬಾದ, ವಿರೇಶ ಸ್ವಾಮಿ, ನಿರಂಜನ್, ಶಶಿಕಾಂತ್, ಜಗದೀಶ್ ಹಾಗೂ ಸೇರಿದಂತೆ ಮುಖಂಡರು, ಕಾರ್ಯಕರ್ತರು, ಬೀದಿ ಬದಿ ವ್ಯಾಪಾರಿಗಳು, ಉಪಸ್ಥಿತರಿದ್ದರು.

# ಆ.26ರಂದು 3.5 ಕೋಟಿ ರೂ. ವೆಚ್ಚದ 'ಹೇಮ-ವೇಮ ಸಮುದಾಯ ಭವನ ಲೋಕಾರ್ಪಣೆ:ಶಂಕರ ರೆಡ್ಡಿ




ಬೀದರ್: ನಗರದ ಮನ್ನಳ್ಳಿ ರಸ್ತೆಯ ಆಮ್ಲಾಪುರದಲ್ಲಿರುವ ಹೇಮರೆಡ್ಡಿ ಮಲ್ಲಮ್ಮ ಮಂದಿರದ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ 'ಹೇಮ–ವೇಮ ಸಮುದಾಯ ಭವನ'ದ ಉದ್ಘಾಟನಾ ಸಮಾರಂಭವು ಆಗಸ್ಟ್ 26, 2026 ರಂದು ಬುಧವಾರ ಬೆಳಿಗ್ಗೆ 10.30ಕ್ಕೆ ಜರುಗಲಿದೆ ಎಂದು ರಡ್ಡಿ ಸಮಾಜದ ಅಧ್ಯಕ್ಷರಾದ ಶಂಕರ ರಡ್ಡಿ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ರವಿವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸಮಾಜದ ಗಣ್ಯರ ಹಾಗೂ ದಾನಿಗಳ ಸಹಕಾರದಿಂದ ಸುಮಾರು 3.5 ಕೋಟಿ ರೂ. ವೆಚ್ಚದಲ್ಲಿ ಈ ಸುಸಜ್ಜಿತ ಭವನವನ್ನು ನಿರ್ಮಿಸಲಾಗಿದೆ. ಉದ್ಘಾಟನಾ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಸಮಾಜದ 5 ಸಾವಿರಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಇದೆ ಎಂದು ಹೇಳಿದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಹರಿಹರ ಎರೆಹೊಸಹಳ್ಳಿಯ ಗುರುಪೀಠದ ಪೂಜ್ಯ ವೇಮಾನಂದ ಮಹಾಸ್ವಾಮಿಗಳು ವಹಿಸಲಿದ್ದು, ರೇಕುಳಗಿ ಶಂಭೂಲಿಂಗೇಶ್ವರದ ಪುಣ್ಯ ಮಂತ್ರ ಮಹರ್ಷಿ ಡಾ. ಎನ್.ಬಿ. ರೆಡ್ಡಿ ಗುರೂಜಿ ಸಮ್ಮುಖ ವಹಿಸುವರು. ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಸಚಿವರಾದ ರಾಮಲಿಂಗಾರೆಡ್ಡಿ ಅವರು ಸಮುದಾಯ ಭವನ ಉದ್ಘಾಟಿಸಲಿದ್ದಾರೆ. ಮಾಜಿ ಸಚಿವರು ಹಾಗೂ ಹಾಲಿ ಶಾಸಕರಾದ ಎಚ್.ಕೆ. ಪಾಟೀಲ ಅವರು ಭವನದ ವೇದಿಕೆ ಉದ್ಘಾಟಿಸುವರು. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತರಾಜ್ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರ ಖಂಡ್ರೆ ದಾಸೋಹ ಭವನ ಲೋಕಾರ್ಪಣೆ ಮಾಡಲಿದ್ದಾರೆ. ತಾನು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ಸಾಗರ್. ಖಂಡ್ರೆ, ಶಾಸಕರಾದ ರಹೀಂ ಖಾನ್, ಪ್ರಭು ಬಿ. ಚವ್ಹಾಣ್, ಡಾ. ಶೈಲೇಂದ್ರ ಬೆಲ್ದಾಳೆ, ಶರಣು ಸಲಗರ, ಡಾ. ಸಿದ್ದು ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ, ಭೀಮರಾವ ಪಾಟೀಲ, ಎಮ್.ಜಿ ಮುಳೆ, ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ, ಮಾಜಿ ಸಚಿವರಾದ ರಾಜಶೇಖರ ಪಾಟೀಲ, ಬಂಡೆಪ್ಪ ಖಾಶೆಂಪೂರ, ವಿಧಾನ ಪರಿಷತ್ ಮಾಜಿ ಸಭಾಪತಿ ರಘುನಾಥರಾವ ಮಲ್ಕಾಪುರೆ, ಮಾಜಿ ಎಮ್.ಎಲ್.ಸಿ ವಿಜಯ ಸಿಂಗ್, ಅರವಿಂದಕುಮಾರ ಅರಳಿ, ಬಳ್ಳಾರಿಯ ಉದ್ಯಮಿ ನಾರಾ ಪ್ರತಾಪರಡ್ಡಿ ಹಾಗೂ ಇತರೆ ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ವಿಶೇಷ ಆಹ್ವಾನಿತರಾಗಿ ಬೆಂಗಳೂರಿನ ರೆಡ್ಡಿ ಜನ ಸಂಘದ ಪ್ರಮುಖರಾದ ವಿ.ಎನ್. ಲಕ್ಷ್ಮಣ ರೆಡ್ಡಿ, ಎನ್. ಶೇಖರ ರೆಡ್ಡಿ, ಬಾಬುರೆಡ್ಡಿ, ಎಂ.ಪಿ. ಕೃಷ್ಣ ರೆಡ್ಡಿ, ಮಂಜುನಾಥ ರಡ್ಡಿ, ಹಾಗೂ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಶಾಲಿನಿ ಆರ್. ಚಿಂತಾಮಣಿ, ಡಾ. ಗುರಮ್ಮ ಸಿದ್ಧಾರೆಡ್ಡಿ ಸೇರಿದಂತೆ ಅನೇಕ ಗಣ್ಯರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಶಂಕರ ರಡ್ಡಿ ತಿಳಿಸಿದರು.

ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಶಾಲಿನಿ ಚಿಂತಾಮಣಿ ಮಾತನಾಡಿ, ಕಳೆದ 10 ದಿನಗಳಿಂದ ಹಳ್ಳಿ ಹಳ್ಳಿಗಳಿಗೆ ತೆರಳಿ ಸಮಾಜದ ಬಾಂಧವರಿಗೆ ಆಹ್ವಾನ ನೀಡಲಾಗಿದ್ದು, "ರೆಡ್ಡಿ ಬಂಧು ಎಲ್ಲಾ ಒಂದು" ಎಂಬ ಸಂದೇಶದೊಂದಿಗೆ ನಡೆಯುತ್ತಿರುವ ಈ ಕಾರ್ಯಕ್ರಮದಲ್ಲಿ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಅವರು ಮನವಿ ಮಾಡಿದರು.

ರಡ್ಡಿ ಸಮಾಜದ ಮುಖಂಡರು ಬೀದರ್ ಮಹಾನಗರ ಪಾಲಿಕೆ ಸದಸ್ಯರಾದ ರಾಜು ಚಿಂತಾಮಣಿ, ಗೋಪಾಲ ರಡ್ಡಿ, ಸಂಜೀವ ರಡ್ಡಿ, ಜಂಪಾ, ರಾಜರಡ್ಡಿ, ಕರುಣಾ ರಡ್ಡಿ,, ಸಂಗೀತಾ ರಡ್ಡಿ, ಬಬಿತಾ ವಿಠಲರಡ್ಡಿ, ಓಂರಡ್ಡಿ, ಪಾಂಡುರಂಗ ರಡ್ಡಿ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ರೈತರ ಬೆಳೆ ಹಾನಿ ಪರಿಶೀಲಿಸಿದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ



ಬೀದರ್: ಬೆಳೆ ಹಾನಿ ಸಮೀಕ್ಷೆ ಸಮರ್ಪಕವಾಗಿ ನಡೆಯಲಿ ಎಕರೆಗೆ 50 ಸಾವಿರ ಪರಿಹಾರ ಘೋಷಿಸಿಸಿ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ.

ಬೀದರ್, ಆ.23: ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಬಿತ್ತನೆ ಮಾಡಿರುವ ಬೆಳೆಗಳಿಗೆ ಹಾನಿಯಾಗಿರುವ ಹಿನ್ನೆಲೆಯಲ್ಲಿ ಬೀದರ್ (ದ) ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು ಭಾನುವಾರ ಅಷ್ಟೂರ, ಮಲ್ಕಾಪುರ, ಸುಲ್ತಾನಪುರ ಗ್ರಾಮಗಳಿಗೆ ಭೇಟಿ ನೀಡಿ ರೈತರ ಜಮೀನುಗಳಲ್ಲಿ ಬೆಳೆಗಳ ಸ್ಥಿತಿಗತಿಯನ್ನು ಪರಿಶೀಲಿಸಿದರು.

ಅಧಿಕಾರಿಗಳೊಂದಿಗೆ ವಿವಿಧ ಗ್ರಾಮಗಳಿಗೆ ತೆರಳಿದ ಶಾಸಕರು, ಜಮೀನುಗಳಿಗೆ ಭೇಟಿ ನೀಡಿ ಮಳೆ ಕೊರತೆಯಿಂದ ಒಣಗುತ್ತಿರುವ ಬೆಳೆಗಳು, ಬೆಳೆಗಳ ಬೆಳವಣಿಗೆ ಹಾಗೂ ಹಾನಿಯ ಪ್ರಮಾಣವನ್ನು ಖುದ್ದಾಗಿ ವೀಕ್ಷಿಸಿದರು. ರೈತರೊಂದಿಗೆ ನೇರವಾಗಿ ಸಂವಾದ ನಡೆಸಿ, ಬಿತ್ತನೆಗೆ ತಗುಲಿರುವ ವೆಚ್ಚ, ಮಳೆಯ ಪ್ರಮಾಣ, ಬೆಳೆಗಳ ಪ್ರಸ್ತುತ ಸ್ಥಿತಿ ಹಾಗೂ ಎದುರಾಗಿರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದುಕೊಂಡರು.

ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಸುರಿಯದ ಕಾರಣ ಬಿತ್ತನೆ ಮಾಡಿದ ಬೆಳೆಗಳು ಬೆಳವಣಿಗೆ ಕಾಣದೆ ರೈತರು ನಷ್ಟ ಅನುಭವಿಸುವಂತಾಗಿದೆ ಎಂದು ರೈತರು ಶಾಸಕರ ಗಮನಕ್ಕೆ ತಂದರು. ರೈತರ ಅಹವಾಲುಗಳನ್ನು ಆಲಿಸಿದ ಶಾಸಕರು, ರೈತರ ಸಂಕಷ್ಟವನ್ನು ಸರ್ಕಾರದ ಗಮನಕ್ಕೆ ತಂದು ಅಗತ್ಯ ಪರಿಹಾರ ಒದಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಬೆಳೆ ಹಾನಿ ಸಮೀಕ್ಷೆ ಸಮರ್ಪಕವಾಗಿ ನಡೆಯಲಿ

ಬೆಳೆ ಹಾನಿಯ ವಾಸ್ತವಿಕ ಸ್ಥಿತಿಯನ್ನು ಅಧಿಕಾರಿಗಳು ಜಮೀನು ಮಟ್ಟದಲ್ಲಿ ಪರಿಶೀಲಿಸಿ ದಾಖಲಿಸಬೇಕು. ಯಾವುದೇ ಅರ್ಹ ರೈತರು ಪರಿಹಾರದಿಂದ ವಂಚಿತರಾಗದಂತೆ ಎಚ್ಚರಿಕೆ ವಹಿಸಬೇಕು. ಬೆಳೆ ಹಾನಿಯ ಸಮೀಕ್ಷೆಯನ್ನು ವೈಜ್ಞಾನಿಕ ಹಾಗೂ ಪಾರದರ್ಶಕ ರೀತಿಯಲ್ಲಿ ನಡೆಸಿ, ಸಮೀಕ್ಷಾ ವರದಿಯನ್ನು ಶೀಘ್ರವಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಸೂಚಿಸಿದರು.

ರೈತರೊಂದಿಗೆ ನೇರ ಸಂವಾದ

ಮೂರು ಗ್ರಾಮಗಳ ಭೇಟಿ ಸಂದರ್ಭದಲ್ಲಿ ರೈತರೊಂದಿಗೆ ನೇರವಾಗಿ ಸಂವಾದ ನಡೆಸಿದ ಶಾಸಕರು, ರೈತರ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಆಲಿಸಿದರು. ಮಳೆ ಕೊರತೆ, ಬೆಳೆ ಹಾನಿ, ಕೃಷಿ ವೆಚ್ಚ, ಮುಂದಿನ ಬಿತ್ತನೆ ಹಾಗೂ ಪರಿಹಾರಕ್ಕೆ ಸಂಬಂಧಿಸಿದಂತೆ ರೈತರು ಹಲವು ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ತಂದರು.

ರೈತರಿಗೆ ಸರ್ಕಾರದ ನಿಯಮಾನುಸಾರ ದೊರೆಯಬೇಕಾದ ಪರಿಹಾರ, ವಿಮೆ ಹಾಗೂ ಇತರ ಸೌಲಭ್ಯಗಳ ಕುರಿತು ಅಧಿಕಾರಿಗಳು ರೈತರಿಗೆ ಸೂಕ್ತ ಮಾಹಿತಿ ನೀಡಬೇಕು. ರೈತರ ಸಮಸ್ಯೆಗಳನ್ನು ಕಚೇರಿಗಳಿಗೆ ಸೀಮಿತಗೊಳಿಸದೆ, ಅಧಿಕಾರಿಗಳು ಸ್ಥಳಕ್ಕೆ ತೆರಳಿ ವಾಸ್ತವಿಕ ಪರಿಸ್ಥಿತಿಯನ್ನು ಅರಿತುಕೊಳ್ಳಬೇಕು ಮತ್ತು ಸರ್ಕಾರ ಶೀಘ್ರ ಎಕರೆಗೆ 50 ಸಾವಿರ ಪರಿಹಾರ ಘೋಷಿಸಬೇಕು ಎಂದು ಅವರು ಆಗ್ರಹಿಸಿದರು.

ವಿಬಿಜಿ ರಾಮ್‌ಜಿ ಕಾಮಗಾರಿಗಳ ಪರಿಶೀಲನೆ

ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗುತ್ತಿರುವ ಮಹತ್ವಾಕಾಂಕ್ಷಿ ಯೋಜನೆಯಾದ ವಿಬಿಜಿ ರಾಮಜಿ ಯೋಜನೆಯಡಿ ನಡೆಯುತ್ತಿರುವ ವಿವಿಧ ಕಾಮಗಾರಿಗಳನ್ನು ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಪರಿಶೀಲಿಸಿದರು.

ಕಾಮಗಾರಿಗಳ ಸ್ಥಳಕ್ಕೆ ತೆರಳಿದ ಅವರು, ಕಾಮಗಾರಿಯ ಪ್ರಗತಿ, ಗುಣಮಟ್ಟ, ಕಾರ್ಮಿಕರ ಹಾಜರಾತಿ, ಕೆಲಸದ ದಿನಗಳು ಹಾಗೂ ಯೋಜನೆಯ ಅನುಷ್ಠಾನದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶ ಕಲ್ಪಿಸುವುದರ ಜೊತೆಗೆ ಗ್ರಾಮಗಳಿಗೆ ಅಗತ್ಯವಿರುವ ಸಾರ್ವಜನಿಕ ಆಸ್ತಿಗಳನ್ನು ನಿರ್ಮಿಸುವ ಉದ್ದೇಶದಿಂದ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು.

ಕಾರ್ಮಿಕರ ದಿನಗೂಲಿ ಹಣ ಬಿಡುಗಡೆ ವಿಳಂಬ ಸಲ್ಲದು

ವಿಬಿಜಿ ರಾಮ್‌ಜಿ ಯೋಜನೆಯಡಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ದಿನಗೂಲಿ ಹಣದ ಪಾವತಿ ಕುರಿತು ಶಾಸಕರು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಕಾರ್ಮಿಕರು ತಮ್ಮ ದುಡಿಮೆಯ ಹಣಕ್ಕಾಗಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಬಾರದು. ಕೆಲಸ ಮಾಡಿದ ಪ್ರತಿಯೊಬ್ಬ ಅರ್ಹ ಕಾರ್ಮಿಕನಿಗೂ ದಿನಗೂಲಿ ಹಣ ಸಕಾಲದಲ್ಲಿ ಪಾವತಿಯಾಗಬೇಕು. ದಿನಗೂಲಿ ಹಣ ಬಿಡುಗಡೆಗೆ ಯಾವುದೇ ಕಾರಣಕ್ಕೂ ಅನಗತ್ಯ ವಿಳಂಬ ಮಾಡಬಾರದು ಎಂದು ಶಾಸಕರು ಸ್ಪಷ್ಟವಾಗಿ ಸೂಚಿಸಿದರು.

ಯೋಜನೆಯ ಅನುಷ್ಠಾನದಲ್ಲಿ ಪಾರದರ್ಶಕತೆ ಕಾಪಾಡಿಕೊಂಡು ಅರ್ಹ ಫಲಾನುಭವಿಗಳಿಗೆ ಯೋಜನೆಯ ಪ್ರಯೋಜನ ತಲುಪಿಸುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ. ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗ ಹಾಗೂ ಮೂಲಸೌಕರ್ಯ ಒದಗಿಸುವ ಯೋಜನೆಗಳ ಅನುಷ್ಠಾನದಲ್ಲಿ ಯಾವುದೇ ಲೋಪವಾಗದಂತೆ ನಿಗಾ ವಹಿಸಲಾಗುವುದು ಎಂದು ಅವರು ಹೇಳಿದರು.

ಅಧಿಕಾರಿಗಳಿಗೆ ಸಮನ್ವಯದ ಸೂಚನೆ

ಕೃಷಿ ಇಲಾಖೆ ಸೇರಿದಂತೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಬೆಳೆ ಹಾನಿ ಸಮೀಕ್ಷೆ, ಪರಿಹಾರ ಪ್ರಕ್ರಿಯೆ ಹಾಗೂ ರೈತರಿಗೆ ದೊರೆಯಬೇಕಾದ ಸೌಲಭ್ಯಗಳ ಕುರಿತು ಯಾವುದೇ ಗೊಂದಲ ಉಂಟಾಗದಂತೆ ಅಧಿಕಾರಿಗಳು ಸ್ಪಷ್ಟ ಮಾಹಿತಿ ನೀಡಬೇಕು ಎಂದು ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಸೂಚಿಸಿದರು.

ರೈತರ ಹಿತಾಸಕ್ತಿ, ಕಾರ್ಮಿಕರ ಕಲ್ಯಾಣ ಹಾಗೂ ಗ್ರಾಮೀಣ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ ಕ್ಷೇತ್ರದ ಗ್ರಾಮೀಣ ಜನರಿಗೆ ಹೆಚ್ಚಿನ ಪ್ರಯೋಜನ ದೊರಕಿಸುವ ನಿಟ್ಟಿನಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಲಾಗುವುದು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಅಷ್ಟೂರ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಸಂಗಮೇಶ ಹಳ್ಳಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಬಾಬುರಾವ ಮಲ್ಕಾಪುರ, ತಾಲ್ಲೂಕಾ ಕೃಷಿ ಅಧಿಕಾರಿ ಆರತಿ ಪಾಟೀಲ್, ತಾಪಂ ಸಹಾಯಕ ನಿರ್ದೇಶಕರಾದ ಲಕ್ಷ್ಮೀ ಬಿರಾದಾರ, ಪಿಡಿಒ ಗಾಯತ್ರಿ, ವಿಬಿಜಿರಾಮಜಿ ಕಾಮಗಾರಿ ಅಧಿಕಾರಿ ವಿಷ್ಣು ಕುಲಕರ್ಣಿ, ಮುಖಂಡರಾದ ರಾಜಶೇಖರ ನೌಬಾದೆ, ಶಿವಕುಮಾರ ಸುಲ್ತಾನಪುರ, ಶಿವಕುಮಾರ ನಾಗಲಗಿದ್ದಿ, ರಾಹುಲ ಅಷ್ಟೂರ, ಆಕಾಶ ಕೋಟೆ, ಪ್ರಕಾಶ ಪಾಟೀಲ, ಬಸವರಾಜ ಹೇಡೆ, ರಾಜಕುಮಾರ ಪಾಟೀಲ್, ಉಮೇಶ್ ರತ್ನಗೊಂಡ, ನರಸಪ್ಪ ಅಷ್ಟೂರ, ರಾಜಕುಮಾರ ರೆಡ್ಡಿ, ನರಸಪ್ಪ, ತುಕಾರಾಮ, ವಿಜಯಕುಮಾರ ಬಾಬಶೆಟ್ಟಿ, ಧನರಾಜ್, ಬಾಬುರಾವ, ರಾಜಕುಮಾರ ಕೋಳಿ, ಗಣಪತಿ ನಂದಿ, ಮಹಾಂತೇಶ, ಆಕಾಶ ಜ್ಯಾಂತೆ, ಬಾಬು, ಶಶೀಲ್, ಸಂಜು ಭಂಡೆ, ದಯಾನಂದ, ಪ್ರಶಾಂತ ಮೋರೆ, ಸುನೀಲಕುಮಾರ, ನಾಗರಾಜ, ಓಂಕಾರ್, ಸುನೀಲ, ಮಂಜು ಪಾಟೀಲ, ಮಂಜು ಹೂಗಾರ, ಸಂಜು ಹೇಡೆ ಮತ್ತಿತರರು ಉಪಸ್ಥಿತರಿದ್ದರು.

Prop: Niranjan Metre
M:8549990086



MAHALAXMI
OFFSET PRINTERS



Shop No.1, Mini Deepak, Theater Complex, Bidar-585401

## ಕುಂಬರವಾಡಕ್ಕೆ ಅಂಬೇಡ್ಕರ ಸಮುದಾಯ ಭವನಕ್ಕಾಗಿ ಜಾಗ ಮಂಜೂರಿಗೆ ಆಗ್ರಹ:ಶಿವಲಿಂಗಪ್ಪ ಕಡೆಮನಿ



ಬೀದರ: ಶುದ್ಧೋಧನ ಮಹಾಮಾಯೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘ ಕುಂ ಬರವಾಡ ಬೀದರ ವತಿಯಿಂದ ಕುಂಬರವಾಡ ಸರ್ವೆ ನಂ 51/1 ರಲ್ಲಿ 75 ಮತ್ತು 80 ಅಡಿ ವಿಸ್ತೀರ್ಣದ ಸರ್ಕಾರಿ ಗೋಮಾಳ ಜಾಗವಿರುತ್ತದೆ. 2001 ರಿಂದ ಈ ಜಾಗದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ ಜಯಂತಿ, ರಮಾ ತಾಯಿ ಜಯಂತಿ, ಬುದ್ಧಪೂರ್ಣಿಮಾ, ವಿಜಯದಶಮಿ ಮಹಾಪರಿ ನಿಬ್ಬಾಣ, ಸಭೆ ಸಮಾರಂಭ ಸಾಂಸ್ಕೃತಿಕ ಕಾರ್ಯಕ್ರಮಗಳು ಪೆಂಟಲಗಳು ಟೆಂಟ್ ಹಾಕಿ ಕೊಂಡು ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿರುತ್ತೇವೆ. ಪರಿಶಿಷ್ಟ ಜಾತಿ ಬಲಗೈಯಿ ಸಮುದಾಯಕ್ಕೆ ಸಂಬಂಧಿಸಿದ 500 ಕುಟುಂಬಗಳು ಇವೆ. ಕೃಷಿ ಕಾರ್ಮಿಕರು ಕಟ್ಟಡ ಕಾರ್ಮಿಕರು ಹೋಟಲ ಕಾರ್ಮಿಕರು, ವಿವಿಧ ಕಂಪನಿಗಳಲ್ಲಿ ಖಾರಖಾನೆಗಳಲ್ಲಿ ಕೆಲಸ ಮಾಡುವ ಬಡ ಜನರುವಾಸವಾಗಿರುವ ಈ ಸ್ಥಳದಲ್ಲಿ ವಿಶ್ವಜ್ಞಾನಿ ಸಂವಿಧಾನ ಶಿಲ್ಪಿ ಆಧುನಿಕ ಭಾರತದ ನಿರ್ಮಾಪಕ ಡಾ. ಬಿ ಆರ್ ಅಂಬೇಡ್ಕರ ಸಮುದಾಯ ಭವನ ನಿರ್ಮಾಣವಾದರೆ, ಇಲ್ಲಿವಾಸವಾಗಿರುವ ಬಡವರಿಗೆ ಅನುಕೂಲವಾಗುತ್ತದೆ,

ಸದರಿ ಸರ್ವೆ ನಂ 51/1 ರಲ್ಲಿನ ಜಾಗದಲ್ಲಿ, ರಾಮಮಂದಿರ ಹನುಮಾನ ಮಂದಿರ ಮಜೀದ, ಹಾಗೂ ಚರ್ಚುಗಳು ನಿರ್ಮಾಣ ಮಾಡಿಕೊಂಡು ತಮ್ಮ ಧಾರ್ಮಿಕ, ಸಾಂಸ್ಕೃತಿಕ ಸಭೆ ಸಮಾರಂ ಭಗಳು, ವಿವಾಹ ಕಾರ್ಯ ಕ್ರಮಗಳು ಮಾಡಿಕೊಳ್ಳುತ್ತಾ ಬರುತ್ತಿದ್ದಾರೆ. ನಾವು ನಮ್ಮವರು ಎನ್ನುವ ಸಾಮಾಜಿಕ ದಾರ್ಮಿಕ ಸಹಿಷ್ಣತೆಯಲ್ಲಿ ಜೀವನ ನಡೆಸುವ ಜನರಿದ್ದಾರೆ. ಬೆಲೆ ಏರಿಕೆಯಲ್ಲಿ ಇಂದಿ ಪರಿಸ್ಥಿಯಲ್ಲಿ ಬಡವರು ತಮ್ಮ ದುಡಿಮೆಯಲ್ಲಿ ಉಪಜೀವನ ನಡೆಸುವುದು ಕಷ್ಟಾಗುತ್ತಿದೆ. ಸಭೆ ಸಮಾರಂಭಗಳು ಸಾಂಸ್ಕೃತಿಕ ಕಾರ್ಯಕ್ರಮಗಳು ಮದುವೆ ಸಮಾರಂಭಗಳನ್ನು ನಡೆಸಲು ಸದರಿ ಸರ್ವೆ ನಂ 51/1 ರಲ್ಲಿ ಉಳಿದಿರುವ 75 ಮತ್ತು 80 ವಿಸ್ತೀರ್ಣದ ಜಾಗದಲ್ಲಿ ಅಂಬೇಡ್ಕರ ಸಮುದಾಯ ಭವನ ನಿರ್ಮಾಣವಾಗಿದ್ದರೆ, ಇಲ್ಲಿನ ಜನರಿಗೆ ಅನಕೂಲವಾಗುತ್ತದೆಯೆಂದು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಡಿ ಕೆ ಶಿವಕುಮಾರ ಉಪ ಮುಖ್ಯಮಂತ್ರಿಗಳಾದ ಡಾ. ಜಿ ಪರಮೇಶ್ವರ, ಸಮಾಜ ಕಲ್ಯಾಣ ಸಚಿವರಾದ ಕೆ ಎಚ್ ಮುನಿಯಪ್ಪ ನಗರಾಭಿವೃದ್ಧಿ ಸಚಿವರಾದ ಡಾ. ಯತೇಂದ್ರ ಸಿದ್ದರಾಮಯ್ಯ ನವರಿಗೆ ಶುಕ್ರವಾರ ಹಮ್ಮಿಕೊಂಡಿರುವ ಪ್ರತಿಭಟನೆ ರ್‍ಯಾಲಿ ಮುಖಾಂತರ ಸಹಾಯಕ ಆಯುಕ್ತರು ಬೀದರ ಶಕಿಲ ರವರು ಮೂಲಕ ಶುದ್ಧೋಧನ ಮಹಾಮಾಯೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘ ಕುಂಬರವಾಡ ಅಧ್ಯಕ್ಷರಾದ ಶಿವಲಿಂಗಪ್ಪ ಕಡೆಮನಿ ಹಿರಿಯ ದಲಿತ ಮುಖಂಡರಾದ ಮಾರುತಿ ಬೌದ್ಧೆ ಅಂಬಾದಾಸ ಗಾಯಕ ವಾಡ ಸುಭಾಷ ಮರ್ಮಾ, ಉಪಾಧ್ಯಕ್ಷರಾದ ನಿಲ್ಲಮ್ಮಾ ಪ್ರಧಾನ ಕಾರ್ಯದರ್ಶಿ ಪ್ರಭಾವತಿ ಖಜಾಂಚಿ ಸಿದ್ದಪ್ಪ ಕಾಂಬಳೆ ಶಿವಕುಮಾರ ತುಂಗಾ, ಬಾಬುರಾವ ಹೊನ್ನಾ ಜಗದಿಶ ಬಿರಾದರ ಮಿಲಿಂದ ಗುರುಜಿ ಬಾಬುರಾವ ಪಾಸ್ವಾನ ಮುಕೇಶ ಶಾಹಗಂಜ್ ಉದಯ ನಾಯಕ ವೀರ ಕನ್ನಡಿಗರ ಸೇನೆ ರಾಜ್ಯ ಸಂಚಾಲಕ ಡಾ. ಸುಬ್ಬಣ್ಣ ಕರಕನ್ಹಳ್ಳಿ ಮನವಿ ಪತ್ರ ಸಲ್ಲಿಸಿದರು, ಆನಿಟ್ಟಿನಲ್ಲಿ ತಾವುಗಳು ಅಗತ್ಯಕ್ರಮವನ್ನು ತೆಗೆದುಕೊಂಡು ಸಂಬಂಧಪಟ್ಟಿರುವ ಅಧಿಕಾರಿಗಳಿಗೆ ಸೂಚಿಸಿ, ಸರ್ವೆ ನಂ 51/1 ರಲ್ಲಿನ 75 ಮತ್ತು 80 ವಿಸ್ತೀರ್ಣದ ಜಾಗವನ್ನು ಸಂವಿಧಾನ ಶಿಲ್ಪಿ ಡಾ., ಬಿ ಆರ್ ಅಂಬೇಡ್ಕರ ಸಮುದಾಯ ಭವನ ನಿರ್ಮಾಣಕ್ಕಾಗಿ ಮಂಜೂರು ಮಾಡಿ, ಬೀದರ ಮಹಾನಗರ ಪಾಲಿಕೆ ಡಿಮ್ಯಾಂಡ ರಜಿಸ್ಟರನಲ್ಲಿ ಡಾ. ಬಿ ಆರ್ ಅಂಬೇಡ್ಕರ ಸಮುದಾಯ ಭವನಕ್ಕಾಗಿ ಕಾದಿರಿಸಿರುವ ಜಾಗವೆಂದು ನಮೊ ದಿಸಬೇಕು.ಸದರಿ ಜಾಗದಲ್ಲಿ ಡಾ. ಬಿ ಆರ್ ಅಂಬೇಡ್ಕರ ಭವನ ನಿರ್ಮಾಣಕ್ಕಾಗಿ 1 ಕೋಟಿ ಹಣವನ್ನು ಸರ್ಕಾರದಿಂದ ಮಂಜೂರು ಮಾಡಬೇಕು. ಪ್ರಮುಖರಾದ ನಾಗಶೇನ ಗಾಯಕವಾಡ ಭರತ ಕಾಂಬಳೆ ಸದಾನಂದ ಸಾಹಿನಾಥ ಕಾಳೆಕರ್ ಸಿದ್ದಾರ್ಥ ಕಾಂಬಳೆ ಮಲ್ಲಿಕಾರ್ಜುನ ಮೊಳಕೇರೆ, ಗೌತಮ ಭೋಸ್ಲೆ ತುಕಾರಾಮ ಸತೀಶ ಕಡೆಮನಿ, ಸುನೀಲಕುಮಾರ, ಸುಲೋಚನಾ ಗಣಪತಿ ಜೈಶ್ರೀ ಗಂಗಮ್ಮಾ ರಮಾಬಾಯಿ, ಪದ್ಮಾವತಿ, ಸುಹಾಸಿನಿ ಪಂಚಶೀಲಾ ಅಂಬಿಕಾ ಸುಮಿತ್ರಾ ರುಕ್ಮಿಣಿ ಸುನೀತಾ, ಚೆನ್ನಮ್ಮಾ ಲಕ್ಷ್ಮೀ ಮಹಾನಂದ ತುಕ್ಕಮ್ಮಾ ಬಸಮ್ಮಾ ಸರಸ್ವತಿ ದ್ರೋಪತಿ ತುಳಜಾಬಾಯಿ ನಾಗಮ್ಮಾ ಕಾಶಿಬಾಯಿ ಕವಿತಾ ಸುರೇಖಾ ಜಗದೇವಿ ಮಂಜುಳಾ ಶೋಭಾ, ಜ್ಯೋತಿ ಸುವರ್ಣ ಇಂದುಮ್ಮಾ ತಾರುಬಾಯಿ ಅಕ್ಕಮ್ಮಾ ನರಸಮ್ಮಾ ನರಸಿಂಗ ಸಂತೋಷ ಪಂಡ್ಲಿಕ್ ವಿಕ್ರಮ ಆಕಾಸ ಅಲ್ಲಾಪೂರ ಆನಂದ ಗಂಗಶೆಟ್ಟಿ ನಾಗಶೆಟ್ಟಿ ಮುಂತಾದವರು ಪ್ರತಿಭಟನೆ ರ್‍ಯಾಲಿಯಲ್ಲಿ ಭಾಗವಹಿಸಿದರು.

## ಹದಿ ಹರೆಯದ ಮಕ್ಕಳಿಗಾಗಿ ದಿನದ ಕಾರ್ಯಾಗಾರ

## ಸಸಿ ಹಾಗೆ ಹೆಣ್ಣುಮಕ್ಕಳ ಜೀವನ ಡಾ.ಎಸ್ ವ್ಹಿ ಪಾಟೀಲ




ಬೀದರ:–ಸಾಧನೆ ಮಾಡುವ ಕಿಚ್ಚಿನ ಜೊತೆಗೆ ಮೌಲ್ಯಯುತವಾದ ಸಂಸ್ಕಾರ, ಶಿಕ್ಷಣ ನಿಮ್ಮ ಜೀವನದಲ್ಲಿ ಆತ್ಮ ವಿಶ್ವಾಸ ಮೂಡಿಸಬಲ್ಲುದೆಂದು ತೋಟಗಾರಿಕಾ ಕಾಲೇಜಿನ ಡೀನ್ ಡಾ ಎಸ್ ವ್ಹಿ ಪಾಟೀಲ ನುಡಿದರು.

ವಚನ ಚಾರಿಟೇಬಲ್ ಸೊಸೈಟಿ ಹಾಗೂ ತೋಟಗಾರಿಕಾ ಕಾಲೇಜಿನ ಎನ್ ಎಸ್ ಘಟಕದ ಸಹಯೋಗದೊಂದಿಗೆ ಇಂದು ಹದಿಹರೆಯದ ಹೆಣ್ಣು ಮಕ್ಕಳ ಒಂದು ದಿವಸದ ಕಾರ್ಯಾಗಾರ ಸಸಿಗೆ ನೀರೆರೆದು ಉದ್ಘಾಟಿಸಿ ಮುಂದುವರೆದು.. ಹೆಣ್ಣು ಮಕ್ಕಳ ಆರೋಗ್ಯ ಬಲು ಸೂಕ್ಷ್ಮ ಯಾವುದೇ ತರಹದ ದೇಹದಲ್ಲಾದ ಬದಲಾವಣೆಗಳು ಪಾಲಕರ ಮುಂದೆ ಹೇಳಿ ಪರಿಹಾರ ಕಂಡು ಕೊಳ್ಳಬೇಕು.

ವಾಸ್ತವಿಕವಾಗಿ ಶಿಕ್ಷಕ, ವೈದ್ಯ, ಪಾಲಕರ ಸಮ್ಮುಖದಲ್ಲಿ ಸುಳ್ಳು ಹೇಳಬಾರದು. ಇಂದು ಅನೇಕ ಮಕ್ಕಳು ಮೊಬೈಲ್ ತಂತ್ರಾಂಶಕ್ಕೆ ಒಳಗಾಗಿ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇದು ಬೆಳೆಯುವ ಪೈರಿಗೆ ಕೊಡಲಿ ಪೆಟ್ಟು ಹಾಕಿದ್ದಂಗ, ಯುವಕರಾದವರು ಸ್ವಲ್ಪ ಮಟ್ಟಿಗೆ ಚಿಂತನ ಮಾಡುವ ಪ್ರವರ್ತಿ ಬೆಳೆಸಿಕೊಳ್ಳಬೇಕು. ವ್ಯಕ್ತಿ ಹಂತ ಹಂತವಾಗಿ ಬೆಳವಣಿಗೆ ಆಗಬೇಕು. ದಿನಾಲು ನಾವೇನು ಊಟ ಮಾಡುತ್ತಿದ್ದೇವೆಂಬ ಸಾಮಾನ್ಯ ಜ್ಞಾನ ಇರಲೇ ಬೇಕು. ಉತ್ತಮ ಗುಣಮಟ್ಟದ ಶಿಕ್ಷಣ ಅನಿವಾರ್ಯ ಆದರೆ ಅದೇ ಪ್ರಾಮುಖ್ಯವಲ್ಲ. ಅದರ ಜೊತೆ ಜೊತೆಗೆ ಆಟ, ಸಾಂಸ್ಕೃತಿಕ, ಕಲೆ ಸಾಹಿತ್ಯದೊಡನೆ ಸ್ವಲ್ಪಮಟ್ಟಿಗೆ ಸಮಯ ಕಳೆದರೆ ನಮ್ಮ ದಿನದ ಕೆಲವು ಹೊತ್ತುಗಳ ಆಯಾಸ ದೂರವಾಗಲು ಸಾಧ್ಯ. ನಮ್ಮ ಜೊತೆಗೆ ಒಳ್ಳೆ ಸಂಭಂಧಗಳು ಬೆಸೆದು ಕೊಂಡರೆ ಸಮಗ್ರವಾಗಿ ಅಭಿವೃದ್ಧಿ ಯಾಗಿ ಹೆಣ್ಣು ಮಕ್ಕಳು ಸಮಾಜದ ಕಣ್ಣು ಎಂಬ ಭಾವನೆ ಮೂಡಲು ಈ ಕಾರ್ಯಾಗಾರ ಪ್ರೇರಣೆ ನೀಡಲೆಂದು ಶುಭ ಹಾರೈಸಿ ಸುಮಾರು ಎಪ್ಪತ್ತು ಜಿಲ್ಲೆಯ ಹೆಣ್ಣು ಮಕ್ಕಳು ಈ ತರಬೇತಿಗೆ ಬಂದು ಹಾಜರಾಗಿರುವುದು ಸಂತಸ. ವಚನ ಚಾರಿಟೇಬಲ್ ಸೊಸೈಟಿಯ ಕಾರ್ಯ ಸ್ಮರಣೀಯ ಎಂದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ ವಚನ ಚಾರಿಟೇಬಲ್ ಸೊಸೈಟಿ ಅಧ್ಯಕ್ಷರಾದ ಡಾ ಶಿವಶಂಕರ ಟೋಕರೆ.. ಇಂದು ಮಕ್ಕಳು ನಮ್ಮ ಪಾಲಿನ ಆಸ್ತಿ. ಅವರ ಬದುಕಿನ ಬವಣೆ ನೀಗಿಸುವ ಜವಾಬ್ದಾರಿ ನಮ್ಮದು. ಸಂಸಾರದಲ್ಲು ಇನ್ನು ಗಂಡು ಹೆಣ್ಣು ಎಂಬ ಭೇದಭಾವ ಇದೆ. ಇದನ್ನು ಹೋಗಲಾಡಿಸಲು ನಾವಿಂದು ವಿಶೇಷವಾಗಿ ಹೆಣ್ಣು ಮಕ್ಕಳಿಗೆ ವಿಶೇಷ ಕಾರ್ಯಾಗಾರ ಆಯೋಜಿಸಿ ಆತ್ಮ ವಿಶ್ವಾಸ ಹೆಚ್ಚಿಸುವ ದಿಶೆಯಲ್ಲಿ ದಾಪುಗಾಲು ಹಾಕಿದ್ದೇವೆ. ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬ ಶರಣರ ತತ್ವ ಅನುಷ್ಠಾನಕ್ಕೆ ತರಬೇಕಾಗಿದೆ.

ಆಕೆ ತಾಯಿ, ಅಕ್ಕ, ತಂಗಿ, ಹೆಂಡತಿ ಯಾಗಿ ವಾತ್ಸಲ್ಯದ ಧಾರೆ ಎರೆಯುವ ಮಾತೆಯ ಸಮಗ್ರವಾದ ಅಭಿವೃದ್ಧಿ ನಮ್ಮ ಧ್ಯೇಯ ಮಂತ್ರವಾಗಬೇಕೆಂದರು. ಈ ಕಾರ್ಯಾಗಾರಕ್ಕೆ ಬೀದರ ಜಿಲ್ಲೆಯ ಎಲ್ಲ ತಾಲೂಕಿನ ಮಕ್ಕಳು ಜೊತೆಗೆ ತೋಟಗಾರಿಕೆ ಕಾಲೇಜಿನ ಹದಿನೆಂಟು ವರ್ಷದ ಕೆಳಗಿನ ಮಕ್ಕಳು ಇಲ್ಲಿ ಹಾಜರಾಗಿರುವುದು ಒಂದು ವಿಶೇಷ.

ಒಂದು ದಿನದ ಕಾರ್ಯಾಗಾರಕ್ಕೆ ಉದಗೀರ ಆಯುರ್ವೇದ ಮೆಡಿಕಲ್ ಕಾಲೇಜಿನ ಡಾ ಸತ್ಯಕ್ಕ ದೈಹಿಕ ಬೆಳವಣಿಗೆ ಹಾಗೂ ಕ್ಷೇಮ,

ಬ್ರಿಮ್ಸ ಕಾಲೇಜಿನ ಡಾ ಪೂರ್ಣಿಮಾ ಮಿಟಕಾರಿ ಮಾನಸಿಕ ಆರೋಗ್ಯ ಮನಸ್ಸು ಹಾಗೂ ಭಾವನಾತ್ಮಕ ಕ್ಷೇಮ, ಶಿಕ್ಷಣ ತಜ್ಞ ಡಾ ಶಿವಲಿಂಗ ಹೇಡೆ ವ್ಯಕ್ತಿತ್ವ ವಿಕಾಸ ವಿಷಯಗಳ ಮೇಲೆ ಉಪನ್ಯಾಸ ಜೊತೆಗೆ ಮಕ್ಕಳ ಜೊತೆಗೆ ಪರಿಪೂರ್ಣವಾದ ಸಂವಾದ ನಡೆಸಿ ಅವರ ಅನೇಕ ಅಂತರಿಕ ಸಮಸ್ಯೆಗಳಿಗೆ ಸೂಕ್ತವಾದ ಉತ್ತರ ನೀಡಿದರು. ಕೊನೆಯಲ್ಲಿ ಮಕ್ಕಳ ಪಾಲಕರ ಜೊತೆಗೆ ಸಂವಾದ ಕೂಡ ನಡೆಯಿತು.

ಕಾರ್ಯಾಗಾರದ ಉದ್ಘಾಟನೆ ಸಮಾರಂಭದಲ್ಲಿ ಮೊದಲಿಗೆ ನಿರ್ದೇಶಕರಾದ ರೇಖಾ ನಿಂಗದಳ್ಳಿ ಪ್ರಾರ್ಥನೆ ನಡೆಸಿ ಕೊಟ್ಟರೆ ನಿರ್ದೇಶಕರಾದ ಶಿವಕುಮಾರ ಸಾಲಿ ಸ್ವಾಗತಿಸಿದರೆ ಸಹಾಯಕ ಪ್ರಾಧ್ಯಾಪಕರಾದ ಡಾ ವಿಜಯಮಹಾಂತೇಶ ವಂದಿಸಿದರೆ ಡಾ ಮಲ್ಲಿಕಾರ್ಜುನ ನಿಂಗದಳ್ಳಿ ನಿರೂಪಣೆ ಮಾಡಿದರೆ, ಪ್ರಾಸ್ತಾವಿಕವಾಗಿ ಡಾ ಶೀಲವಂತ ನಾವದಗೇರೆ ಹಲವು ವಿಚಾರ ಪ್ರಸ್ತುತ ಪಡಿಸಿದರು.

ಕಾರ್ಯಾಗಾರದಲ್ಲಿ ಅಲ್ಲಮಪ್ರಭು ನಾವದಗೇರೆ, ಡಾ ಕವಿತಾ ರಾಠೋಡ, ಪ್ರಕಾಶ ಗಂದಿಗುಡೆ, ಸಿದ್ರಾಮ ಸೀತಾ, ಶ್ರೀಕಾಂತ ಲಕ್ಕಶೆಟ್ಟಿ, ಸಂಜೀವಕುಮಾರ ಪಾಟೀಲ ಹಾಜರಿದ್ದು ಕಾರ್ಯಾಗಾರ ಯಶಸ್ವಿಯಾಗಿ ನೆರವೇರಿಸಿದರು.

## ವಿಚಾರ ಸಂಕಿರಣದಲ್ಲಿ ಡಾ. ವೆಂಕಟರಾವ್ ಪಲಾಟೆ ಹೇಳಿಕೆ

## ಬಿ.ಎಲ್.ರೈಸ್ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ




ಬೀದರ್: ಸಂಶೋಧಕ ಬಿ.ಎಲ್. ರೈಸ್ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯಾಗಿದ್ದಾರೆ ಎಂದು ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ವಿಭಾಗದ ಮುಖ್ಯಸ್ಥ ಡಾ. ವೆಂಕಟರಾವ್ ಎಂ. ಪಲಾಟೆ ಹೇಳಿದರು.

ರೆವರೆಂಡ್ ಡಾ. ಜೆ.ಟಿ. ಸೀಮಂಡ್ಸ್ ಕನ್ನಡ ಸಾಹಿತ್ಯ ಸಂಘ ದಿಂದ ನಗರದ ಮಂಗಲಪೇಟ್‌ನ ರೆವರೆಂಡ್ ರಾಸ್ ಮೆಮೋರಿಯಲ್ ಹಳೆಯ ಚರ್ಚ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಗ್ರಂಥ ಸಂಪಾದನೆ ಮತ್ತು ಬಿ.ಎಲ್. ರೈಸ್ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ರೈಸ್ ಅವರು ರಾಜ್ಯದಲ್ಲಿ ಮೊದಲ ಬಾರಿಗೆ ಒಂಬತ್ತು ಸಾವಿರ ಶಾಸನಗಳನ್ನು ಸಂಗ್ರಹಿಸಿ, ಅವುಗಳ ಶಾಸ್ತ್ರೀಯ ಅಧ್ಯಯನ ಮಾಡಿದ್ದರು. ಶಾಸನಗಳನ್ನು ಕಾಲಾನುಕ್ರಮವಾಗಿ ಜೋಡಿಸಿ, ಆ ವರೆಗೆ ಕಾಲ ಗರ್ಭದಲ್ಲಿ ಮುಚ್ಚಿ ಹೋಗಿದ್ದ ಕರ್ನಾಟಕದ ಘನ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸಿದ ಶ್ರೇಯ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ದೇಶದಲ್ಲಿ ಮೊದಲ ಬಾರಿಗೆ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ರಾಂತಿ ಮಾಡಿದ್ದು ಕ್ರೈಸ್ತ ಮಿಷನರಿಗಳು ಎಂದು ಹೇಳಿದರು.

ಸತಿ ಸಹಗಮನ ಪದ್ಧತಿ, ಸ್ತ್ರೀ ಸ್ವಾತಂತ್ರ್ಯ, ವಿಧವಾ ವಿವಾಹ, ಶಿಕ್ಷಣದ ಸಾರ್ವತ್ರೀಕರಣ ಹಾಗೂ ಹೆಣ್ಣು ಶಿಶು ಹತ್ಯೆಯಂತಹ ಸಾಮಾಜಿಕ ಅನಿಷ್ಠ ಪದ್ಧತಿಗಳನ್ನು ತೊಲಗಿಸಿದರು ಎಂದು ತಿಳಿಸಿದರು.

ಕ್ರೈಸ್ತ ಮಿಷನರಿಗಳು ದಲಿತ, ಹಿಂದುಳಿದ, ಕೆಳ ವರ್ಗದ ಹಾಗೂ ಸಮಾಜದ ಅತ್ಯಂತ ಕೆಳಸ್ತರದ ವ್ಯಕ್ತಿಯ ಜೀವನಕ್ಕೂ ಬೆಲೆ ಒದಗಿಸಿಕೊಟ್ಟರು. ಆರೋಗ್ಯ ಹಾಗೂ ಶಿಕ್ಷಣವನ್ನು ಸೇವೆಯಾಗಿ ಪರಿಚಯಿಸಿದರು ಎಂದು ಹೇಳಿದರು.

ಬಿ.ಎಲ್. ರೈಸ್ ಕುರಿತು ವಿಶೇಷ ಉಪನ್ಯಾಸ ನೀಡಿದ ಕರ್ನಾಟಕ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಮಹಾನಂದಾ ಮಡಕಿ ಅವರು, ಬಿ.ಎಲ್. ರೈಸ್ ಒಬ್ಬ ಮಹಾನ್ ಸಂಶೋಧಕ ಎಂದು ಬಣ್ಣಿಸಿದರು.

ಕರ್ನಾಟಕದಲ್ಲಿ ಪುರಾತತ್ವ ಇಲಾಖೆಯ ಮುಖ್ಯಸ್ಥರಾಗಿ ದಕ್ಷತೆಯಿಂದ ತಮ್ಮ ಕರ್ತವ್ಯ ನಿರ್ವಹಿಸುತ್ತಲೇ ಸಾವಿರಾರು ಕನ್ನಡ ಶಾಸನಗಳನ್ನು ಸಂಗ್ರಹಿಸಿದರು. 1879 ರಲ್ಲಿ ಪ್ರಥಮ ಬಾರಿಗೆ ಬೃಹತ್ ಸಂಪುಟ ಸಿದ್ಧಪಡಿಸಿ ಕರುನಾಡಿಗೆ ಸಮರ್ಪಿಸಿದರು ಎಂದು ತಿಳಿಸಿದರು.

ಶಾಸನಗಳೆಂಬ ಮಾಹಿತಿಯೇ ಇಲ್ಲದ ಕಾಲದಲ್ಲಿ ಅವುಗಳ ಸಂಗ್ರಹ, ವರ್ಗೀಕರಣ, ಅಧ್ಯಯನ, ಪದ ಪರಿಚಯ, ವಿಶ್ಲೇಷಣೆಯೊಂದಿಗೆ ಸಂದರ್ಭ ಸಹಿತ ವಿವರಣೆ ನೀಡಿದರು. ಕರ್ನಾಟಕದ ಭವ್ಯ ಇತಿಹಾಸ ಪರಿಚಯವಾದದ್ದು ಶಾಸನಗಳಿಂದಲೇ ಎಂದು ಹೇಳಿದರು. ಕನ್ನಡ ನಾಡಿನ ಶ್ರೇಷ್ಠ ಕವಿಗಳಾದ ಪಂಪ, ನಾಗವರ್ಮರಂತಹ ಅನೇಕ ದಿಗ್ಗಜ ಕವಿಗಳನ್ನು ನಾಡಿಗೆ ಪರಿಚಯಿಸಿದರು. ಕ್ರೈಸ್ತ ಮಿಷನರಿಗಳ ಪರಿಶ್ರಮದಿಂದಲೇ ಕನ್ನಡದ ಅನೇಕ ಅತ್ಯಮೂಲ್ಯ ಕೃತಿಗಳು ಲಭಿಸಿವೆ ಎಂದು ತಿಳಿಸಿದರು. ಪ್ರಾಕೃತ, ಸಂಸ್ಕೃತ, ಪಾಲಿ, ದೇವನಾಗರಿ ಮತ್ತು ಹಳೆಗನ್ನಡ ಲಿಪಿಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ, ವಿಂಗಡಿಸಿ, ಪ್ರಕ್ಷಿಪ್ತ ಪದ್ಯ ಬೇರ್ಪಡಿಸಿ ಮೂಲ ಪದ್ಯಕ್ಕೆ ಹತ್ತಿರ ಹಾಗೂ ವಿಶ್ವಾಸಾರ್ಹ ಪದ್ಯಗಳನ್ನು ಮುದ್ರಿಸಿ, ಕನ್ನಡ ಸಾರಸತ್ವ ಲೋಕಕ್ಕೆ ಸಮರ್ಪಿಸಿದರು. ಅದರಿಂದ ಕನ್ನಡ ಸಾಹಿತ್ಯ ಚರಿತ್ರೆ ಜಗತ್ತಿನ ಕೆಲವೇ ಕೆಲವು ಸಮೃದ್ಧ ಮತ್ತು ಪುರಾತನ ಭಾಷೆಗಳ ಸಾಲಿನಲ್ಲಿ ನಿಲ್ಲುವಂತೆ ಮಾಡಿದ ಬಿ.ಎಲ್. ರೈಸ್ ಕನ್ನಡಿಗರ ಪಾಲಿಗೆ ಪ್ರಾತಃಸ್ಮರಣೀಯರು ಎಂದರು.

ರೈಸ್ ಬದುಕಿರುವವರೆಗೆ ಕನ್ನಡದಲ್ಲಿಯೇ ವ್ಯವಹರಿಸಿದರು. ಕನ್ನಡ ಅಂದರೆ ಅವರಿಗೆ ಪಂಚಪ್ರಾಣ. ಇಂಗ್ಲಿಷರೊಂದಿಗೂ ಕನ್ನಡದಲ್ಲಿಯೇ ವ್ಯವಹರಿಸುವ ಮಟ್ಟಿಗೆ ಕನ್ನಡಮಯವಾಗಿದ್ದರು ಎಂದು ಹೇಳಿದರು.

ದಿವ್ಯ ಸಾನಿಧ್ಯ ವಹಿಸಿದ್ದ ಮೆಥೋಡಿಸ್ಟ್ ಕೇಂದ್ರ ಸಭೆಯ ಜಿಲ್ಲಾ ಮೇಲ್ವಿಚಾರಕ ರೆವರೆಂಡ್ ಡಿಸೋಜ ಥಾಮಸ್ ಅವರು, ಕ್ರೈಸ್ತ ಮಿಷನರಿಗಳು ಕ್ರೈಸ್ತ ಧರ್ಮಕ್ಕೆ ನೀಡಿದ ಕೊಡುಗೆಗಿಂತಲೂ ಹೆಚ್ಚು ಕರುನಾಡಿಗೆ, ಕನ್ನಡ ಭಾಷೆಗೆ ಮತ್ತು ಸಾಹಿತ್ಯಕ್ಕೆ ನೀಡಿದ್ದಾರೆ ಎಂದು ನೆನೆದರು.

ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸುಶಿಕ್ಷಿತನಾಗುವ, ಸುಸಂಸ್ಕೃತ, ಗೌರವಯುತ ಬದುಕು ಕಟ್ಟಿಕೊಳ್ಳುವ ಶಕ್ತಿ, ಸಾಮರ್ಥ್ಯ ತುಂಬಿದವರೇ ಕ್ರೈಸ್ತ ಮಿಷನರಿಗಳು ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಬಿ.ಕೆ. ಸುಂದರರಾಜ ಅಧ್ಯಕ್ಷತೆ ವಹಿಸಿದ್ದರು. ರೆವರೆಂಡ್ ಬಿ. ಜಯ, ರೆವರೆಂಡ್ ಸೈಮನ್ ಮಾರ್ಕ್, ರೆವರೆಂಡ್ ಬಾಬು ಪಾಸ್ಟರ್ ಇದ್ದರು.

ಶರಣಪ್ಪ ಸಿಂಗಾರೆ ಸ್ವಾಗತಿಸಿದರು. ಟಿ.ಎಂ. ಮಚ್ಚೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ. ಸುನೀಲಕುಮಾರ ಮಾಳಗೆ ನಿರೂಪಿಸಿದರು. ಶಿರೋಮಣಿ ತಾರೆ ವಂದಿಸಿದರು.

## ಶಿವಾನಿ ಈಗ ಸಾಂಸ್ಕೃತಿಕ ರಾಯಭಾರಿ:ಎಂಟು ಪ್ರಶಸ್ತಿಗಳ ಒಡತಿ



ಬೀದರ್: ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ , ಮುಂಬೈ ವತಿಯಿಂದ ನವೆಂಬರ್–ಡಿಸೆಂಬರ್ 2024ರಲ್ಲಿ ನಡೆದ ಸಂಗೀತ ವಿಶಾರದ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ರ್‍ಯಾಂಕ್ ಗಳಿಸುವುದರ ಜೊತೆಗೆ ಗಾಯನ ವಿಷಯದಲ್ಲಿಯೂ ಅತ್ಯುನ್ನತ ಅಂಕಗಳನ್ನು ಪಡೆದಿರುವ ಬೀದರ್‌ನ ಖ್ಯಾತ ಗಾಯಕಿ ಕು. ಶಿವಾನಿ ಶಿವದಾಸ ಸ್ವಾಮಿ ಅವರು ಒಟ್ಟು ಎಂಟು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಭಾನುವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸ್ವತಃ ಮಾತನಾಡಿದ ಕು.ಶಿವಾನಿ ಶಿವದಾಸ ಸ್ವಾಮಿ, ಈ ಸಾಧನೆ ತನ್ನ ಜೀವನದ ಮಹತ್ವದ ಮೈಲಿಗಲ್ಲಾಗಿದ್ದು, ದೇಶದಾದ್ಯಂತ ತನ್ನ ಪ್ರತಿಭೆಯನ್ನು ಗುರುತಿಸಿರುವುದು ಸಂತಸ ತಂದಿದೆ ಎಂದು ಹೇಳಿದರು.

ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯದ ದೀಕ್ಷಾಂತ ಸಮಾರಂಭವು ಆಗಸ್ಟ್ 22ರಂದು ನವಿಮುಂಬೈನ ವಾಶಿಯ ವಿಷ್ಣುದಾಸ ಭಾವೆ ನಾಟ್ಯಗೃಹದಲ್ಲಿ ನಡೆದಿದ್ದು, ಸಮಾರಂಭದಲ್ಲಿ ತನಗೆ ಪ್ರೀತಮ್ ಕೌರ್ ಸೌದಿ ಪ್ರಶಸ್ತಿ,, ದಿವಂಗತ ಪಂ. ದಿ.ವಿ. ಪಾಲುಸ್ಕರ್ ಪ್ರಶಸ್ತಿ,, ಸೌ. ನಳಿನಿ ಪ್ರತಾಪ್ ಕಾನವಿಂದೆ ಪ್ರಶಸ್ತಿ,, ಪ್ರಾ. ವಾಸುದೇವ ಚಿಂತಾಮಣಿ ವಾಘಮಾರೆ ಪ್ರಶಸ್ತಿ,, ಹರಿಓಂ ಟ್ರಸ್ಟ್ (ಗಾಯನ) ಪ್ರಥಮ ಪ್ರಶಸ್ತಿ,, ಶ್ರೀ ಹರಿಶ್ಚಂದ್ರ ಬಾಳಕೃಷ್ಣ ಪೋತದಾರ್ ಪ್ರಶಸ್ತಿ,, ಪಂ. ನಾ.ಕೃ. ಕ–ಹಾಡೆ ಸ್ಮೃತಿ ಪ್ರಶಸ್ತಿ ಹಾಗೂ ದಿವಂಗತ ಸೌ. ಪ್ರಾಜಕ್ತಾ ಪುರುಷೋತ್ತಮ ಕುಲಕರ್ಣಿ ಪ್ರಶಸ್ತಿ ಸೇರಿದಂತೆ ಎಂಟು ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

“ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ ಮುಂಬೈ ವತಿಯಿಂದ ನವೆಂಬರ್–ಡಿಸೆಂಬರ್ ಅವಧಿಯಲ್ಲಿ ನಡೆಸಿದ ಸಂಗೀತ ಪರೀಕ್ಷೆಯಲ್ಲಿ ಇಡೀ ದೇಶದಲ್ಲಿಯೇ ಪ್ರಥಮ ರ್‍ಯಾಂಕ್ ಪಡೆದಿರುವುದು ನನಗೆ ಅತ್ಯಂತ ಸಂತಸ ತಂದಿದೆ. ಈ ಸಾಧನೆ ನನ್ನೊಬ್ಬಳದ್ದಲ್ಲ. ನನ್ನನ್ನು ಪ್ರೋತ್ಸಾಹಿಸಿದ ಗುರುಗಳು, ತಂದೆ–ತಾಯಿ, ಕುಟುಂಬಸ್ಥರು ಹಾಗೂ ಬೀದರ್‌ನ ಜನರ ಸಹಕಾರವೇ ಇದಕ್ಕೆ ಕಾರಣ,” ಎಂದು ಶಿವಾನಿ ಹೇಳಿದರು.

### ಶಿವಾನಿಗೆ ಸರ್ಕಾರಿ ಸೌಲಭ್ಯ ಕಲ್ಪಿಸಬೇಕು: ರಾಮಕೃಷ್ಣನ್ ಸಾಳೆ

ಶಿವಾನಿ ಅವರ ಅಪರೂಪದ ಸಾಧನೆಯನ್ನು ಗುರುತಿಸಿ ರಾಜ್ಯ ಸರ್ಕಾರ ಅಗತ್ಯ ಸರ್ಕಾರಿ ಸೌಲಭ್ಯ ಹಾಗೂ ಪ್ರೋತ್ಸಾಹ ನೀಡಬೇಕು ಎಂದು ವಿಶ್ವ ಹಿಂದು ಪರಿಷತ್ ನ ರಾಮಕೃಷ್ಣನ್ ಸಾಳೆ ಒತ್ತಾಯಿಸಿದರು. ಇಂತಹ ಪ್ರತಿಭೆಗಳನ್ನು ಬೆಳೆಸುವ ಮೂಲಕ ಬೀದರ್ ಜಿಲ್ಲೆ ಹಾಗೂ ಕರ್ನಾಟಕದ ಕೀರ್ತಿಯನ್ನು ರಾಷ್ಟ್ರ ಮಟ್ಟದಲ್ಲಿ ಹೆಚ್ಚಿಸಬಹುದು. ಶಿವಾನಿ ಅವರು ಇದೀಗ ಜಿಲ್ಲೆಯ ಸಾಂಸ್ಕೃತಿಕ ರಾಯಭಾರಿಯಾಗಿ ಗುರುತಿಸಿಕೊಂಡಿದ್ದು, ಅವರಿಗೆ ಸರ್ಕಾರದ ಬೆಂಬಲ ಅಗತ್ಯವಾಗಿದೆ ಎಂದು ಹೇಳಿದರು.

### ರಾಷ್ಟ್ರಮಟ್ಟದಲ್ಲಿ ಶಿವಾನಿ ಹೆಸರು ಶಿಫಾರಸು ಮಾಡಲಿ: ರಾಜೇಂದ್ರಸಿಂಗ್ ಪವಾರ್

ರಾಜ್ಯ ಸರ್ಕಾರವು ಶಿವಾನಿ ಅವರ ಸಾಧನೆಯನ್ನು ಪರಿಗಣಿಸಿ ಅವರ ಹೆಸರನ್ನು ರಾಷ್ಟ್ರ ಮಟ್ಟದ ಪ್ರಶಸ್ತಿಗಳು ಹಾಗೂ ಗೌರವಗಳಿಗೆ ಶಿಫಾರಸು ಮಾಡಬೇಕು ಎಂದು ಖ್ಯಾತ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಗಾರ ಡಾ.ರಾಜೇಂದ್ರ ಸಿಂಗ್ ಪವಾರ್ ಆಗ್ರಹಿಸಿದರು.

ಸಂಗೀತ ಕ್ಷೇತ್ರದಲ್ಲಿ ಇಷ್ಟು ಚಿಕ್ಕ ವಯಸ್ಸಿನಲ್ಲಿ ದೇಶಿಯ ಮಟ್ಟದಲ್ಲಿ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಸರ್ಕಾರ ಹಾಗೂ ಸಮಾಜ ಶಿವಾನಿ ಅವರ ಪ್ರತಿಭೆಗೆ ಅಗತ್ಯ ಪ್ರೋತ್ಸಾಹ ನೀಡಬೇಕು ಎಂದರು.

### ಮಗಳನ್ನು ನಾವು ಹೆತ್ತಿರಬಹುದು, ಆದರೆ ಬೆಳೆಸುತ್ತಿರುವುದು ಜನರು: ಶಿವದಾಸ ಸ್ವಾಮಿ

ಶಿವಾನಿ ಅವರ ತಂದೆ ಶಿವದಾಸ ಸ್ವಾಮಿ ಮಾತನಾಡಿ, “ಮಗಳಿಗೆ ನಾವು ಜನ್ಮ ನೀಡಿರಬಹುದು. ಆದರೆ ಆಕೆಯ ಪ್ರತಿಭೆಯನ್ನು ಬೆಳೆಸುತ್ತಿರುವುದು, ಪ್ರೋತ್ಸಾಹಿಸುತ್ತಿರುವುದು ಹಾಗೂ ಬೆಂಬಲಿಸುತ್ತಿರುವುದು ಇಡೀ ಸಮಾಜ. ಜನರು ನೀಡುತ್ತಿರುವ ಪ್ರೀತಿ ಮತ್ತು ಸಹಕಾರದಿಂದಲೇ ಶಿವಾನಿ ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗಿದೆ. ಮುಂದೆಯೂ ಎಲ್ಲರೂ ಸಹಕರಿಸಿ, ಪ್ರೋತ್ಸಾಹಿಸಬೇಕು,” ಎಂದು ಮನವಿ ಮಾಡಿದರು.

ಸಂಗೀತ ಕ್ಷೇತ್ರದಲ್ಲಿ ಇನ್ನಷ್ಟು ಸಾಧನೆ ಮಾಡುವ ಗುರಿ ಹೊಂದಿರುವ ಶಿವಾನಿ, ತಮ್ಮ ಸಾಧನೆಯ ಮೂಲಕ ಬೀದರ್ ಜಿಲ್ಲೆಯ ಹೆಸರು ದೇಶದಾದ್ಯಂತ ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಆಶಯ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕನ್ನಡಾಂಬೆಯ ಗೆಳೆಯರ ಬಳಗದ ಅಧ್ಯಕ್ಷ ವಿರೂಪಾಕ್ಷ ಗಾದಗಿ, ಉದಯ ಪಾಟೀಲ, ಶಿವಾನಿಯ ತಾಯಿ ಕವಿತಾ ಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

PROP: YALLALING



YALLALING
OFFSET PRINTERS
Shop No.19, Mini Deepak, Theater Complex, Bidar-585401

Cella: 9036353293
8050109316



KARUNADU NUDI Kannada daily news paper owned and published by yallaling, Printed at Mahalaxmi Offset Printers, Mini Deepak Theater Complex, Shop No. 1, Gandhi Gunj Road, Bidar 585401, and Published at H NO 1, VTC DADDAPUR, POST MARKHAL, BIDAR,KARNATAKA -585402 EDITOR:YALLALING